# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಭಾನುವಾರ, ಆಗಸ್ಟ್ 21, 2022

ಸಂಪುಟ : 49 ಸಂಚಿಕೆ : 99 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





ದೇವರಾಜ ಅರಸು ಜನ್ಮ ದಿನದ ಅಂಗವಾಗಿ ಕಲಾ ತಂಡಗಳೊಂದಿಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಬಳಿ ಇರುವ ಡಿ.ದೇವರಾಜ್ ಅರಸ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಜಿಲ್ಲಾಧಿಕಾರಿ ಕಚೇರಿ ವರೆಗೆ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಿತು. ಈ ವೇಳೆ ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಸಿಇಒ ಡೊಳ್ಳು ಭಾರಿಸಿ ಗಮನ ಸೆಳೆದರು.

# ಭಾವೆ ಭೂದಾನ ಮೀರಿಸುವಂತೆ ಅರಸು ಭೂ ಸುಧಾರಣೆ

## ದೇವರಾಜ ಅರಸು ಜನ್ಮ ದಿನಾಚರಣೆಯಲ್ಲಿ ಉಳುವವನಿಗೆ ಭೂ ಮಾಲೀಕತ್ವದ ನೀಡಿದ ನಾಯಕನ ಸ್ಮರಣೆ

ದಾವಣಗೆರೆ, ಆ. 20 - ವಿನೋಬ ಭಾವೆ ಅವರ ಭೂದಾನ ಚಳುವಳಿಯನ್ನೂ ಮೀರಿಸುವ ರೀತಿಯಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣೆ ಜಾರಿಗೆ ತಂದವರು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು. ಅವರಿಂದಾಗಿ ರಾಜ್ಯದ ಜಮೀನು ರಹಿತರು ಭೂ ಮಾಲೀಕರಾಗಲು ಸಾಧ್ಯವಾಯಿತು ಎಂದು ಉಪನ್ಯಾಸಕ ದಾದಾಪೀರ್ ನವಿಲೇಹಾಳ್ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಗರ ಪಾಲಿಕೆ ಹಾಗೂ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ಸಂಯುಕ್ತಾಶ್ರಯದಲ್ಲಿ ನಗರದ ತುಂಗಭದ್ರಾ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅರಸು ಅವರ 107ನೇ ಜನ್ಮ ದಿನಾಚರಣೆಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಅರಸು ಅವರು ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಭೂ ಸುಧಾರಣಾ ಇಲಾಖೆ ರೂಪಿಸಿದರು. ಭೂ ಸುಧಾರಣೆಯು ಅರಸು ಪಾಲಿಗೆ ಜೀವನ್ಮರಣದ ಪ್ರಶ್ನೆ ಎಂಬಂತಿತ್ತು ಎಂದು ಹೇಳಿದರು.

ಜೀತ ಪದ್ಧತಿ ಹಾಗೂ ಮಲ ಹೊರುವ ಅನಿಷ್ಠ ಪದ್ಧತಿಗಳನ್ನು ಅರಸು ನಿಷೇಧಿಸಿದರು. ರಾಜ್ಯಾದ್ಯಂತ ವಸತಿ ನಿಲಯ ಸ್ಥಾಪಿಸಿದರು. ಗುಡಿಸಲುಗಳಿಗೆ ಉಚಿತ ವಿದ್ಯುತ್ ಪೂರೈಸುವ ಭಾಗ್ಯಜ್ಯೋತಿ, ಪದವೀಧರರಿಗೆ ನಿರುದ್ಯೋಗ ಭತ್ಯೆ, ವಿಧವಾ ವೇತನದಂತಹ ಯೋಜನೆಗಳನ್ನು ಜಾರಿಗೆ ತಂದರು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ದೇವರಾಜ ಅರಸು ಜಯಂತಿಯನ್ನು ಈ ವರ್ಷ ಮೂರು ದಿನಗಳ ಕಾಲ ಆಚರಿಸಲು ರಾಜ್ಯ ಸರ್ಕಾರ ಸೂಚಿಸಿದೆ. ಅದರಂತೆ ಇಂದಿನಿಂದ ಮೂರು ದಿನಗಳ ಕಾಲ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸರ್ಕಾರದ ನಿಗಮಗಳ ಮೂಲಕ ಕುಲಕಸುಬುಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಯೋಜನೆಗಳ ಲಾಭ ಪಡೆದು ಜನರು ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಬಲವಾದಾಗ ದೇಶವೂ ಸುಭದ್ರವಾಗುತ್ತದೆ ಎಂದವರು ತಿಳಿಸಿದರು.

ಪ್ರಸ್ತುತ ಸಾಲಿನಿಂದ ಜಾರಿಗೆ ತಂದಿರುವ 'ದೇವರಾಜ್ ಅರಸ್ ಪ್ರಶಸ್ತಿ'ಯನ್ನು ಜಿಲ್ಲೆಯ ಗೊಲ್ಲರ ಯಾದವ ಸಂಘಕ್ಕೆ ವಿತರಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಸಂಘದ ಅಧ್ಯಕ್ಷ ಎಸ್. ತಿಪ್ಪೇಸ್ವಾಮಿ ಮಾತನಾಡಿ, ಅನೇಕ ಹಳ್ಳಿಗಳಲ್ಲಿ (2ನೇ ಪುಟಕ್ಕೆ)

### ಈ ಮಚ್ಚು ಹಿಡಿಯಲು ಬೇಕು ಲೈಸೆನ್ಸ್

ದೇವರಾಜ ಅರಸು ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ಭವನದಲ್ಲಿ ಹಿಂದುಳಿದ ವರ್ಗಗಳ ವಿವಿಧ ಕಾಯಕ ಸಮುದಾಯದವರು ರೂಪಿಸಿದ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಆಯೋಜಿಸಲಾಗಿತ್ತು. ದಾವಣಗೆರೆ ತಾಲ್ಲೂಕು ಕಮ್ಮಾರ ಸಮಾಜ ಕ್ಷೇಮಾಭಿವೃದ್ಧಿ ಸಂಘದವರು ಮಚ್ಚುಗಳನ್ನು ಮಾರಾಟಕ್ಕೆ ತಂದಿದ್ದರು. ಅಲ್ಲಿರುವ ಮಚ್ಚುಗಳಲ್ಲಿ ಕೆಲವು ಸಾಕಷ್ಟು ಉದ್ದವಾಗಿದ್ದುದನ್ನು ಗಮನಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಸರ್ಕಾರದ ನಿಯಮಗಳ ಪ್ರಕಾರ 1.5 ಅಡಿಗಿಂತ ಹೆಚ್ಚು ಉದ್ದವಿರುವ ಮಚ್ಚುಗಳಿಗೆ ಲೈಸೆನ್ಸ್ ಕಡ್ಡಾಯ. ಸಂಘದವರು ಈ ಬಗ್ಗೆ ಗಮನ ಹರಿಸಬೇಕು ಎಂದರು.

# ಹಾಸ್ಟೆಲ್‌ಗಳ ಸುಧಾರಣೆಗೆ 250 ಕೋಟಿ ರೂ. : ಸಿಎಂ

ಬೆಂಗಳೂರು, ಆ.20 - ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸ್ಥಿತಿಗತಿಗಳ ಸುಧಾರಣೆ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು 250 ಕೋಟಿ ರೂ. ಮಂಜೂರು ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಿರುವ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಹಾಗೂ ಡಿ.ದೇವರಾಜ ಅರಸು ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರದ ಎಲ್ಲ ವಿದ್ಯಾರ್ಥಿ ನಿಲಯಗಳ ಸಾಮರ್ಥ್ಯವನ್ನು ಶೇ. 25 ರಷ್ಟು ಹೆಚ್ಚಿಸಲು ಅನುದಾನ ನೀಡಿದೆ. ರಾಜ್ಯದ ಒಟ್ಟು 2439 ಹಾಸ್ಟೆಲ್‌ಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ.

ವಿದ್ಯಾರ್ಥಿ ವೇತನದಲ್ಲಿ ತಲಾ 150 ರೂ.ಗಳನ್ನು ಹೆಚ್ಚಿಸಲಾಗಿದೆ. 195 ವಿದ್ಯಾರ್ಥಿನಿಲಯ ಕಟ್ಟಡಗಳು ನಿರ್ಮಾಣದ ವಿವಿಧ ಹಂತದಲ್ಲಿವೆ. ಕನಕದಾಸರ ಹೆಸರಿನಲ್ಲಿ 50 ಹೊಸ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದೆ.

ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸಲು ಪ್ರತಿ ಗ್ರಾಮದಲ್ಲಿ ಸ್ವಾಮಿ ವಿವೇಕಾನಂದ ಹೆಸರಲ್ಲಿ ಸಂಘ ಸ್ಥಾಪಿಸಿ, 10 ಲಕ್ಷ ರೂ. ನೀಡುವುದಲ್ಲದೆ, ಮಾರುಕಟ್ಟೆ ವ್ಯವಸ್ಥೆ (2ನೇ ಪುಟಕ್ಕೆ)

### ದೇವರಾಜ ಅರಸು ಹೆಸರಲ್ಲಿ ಪಿಹೆಚ್‌ಡಿ ಮಾಡುವ ವಿದ್ಯಾರ್ಥಿಗಳಿಗೆ ಒಟ್ಟು 4 ಕೋಟಿ ರೂ. ಅನುದಾನ ಬಿಡುಗಡೆ ಮಾಡಿ ಆದೇಶ

# ಪಂಚಮಸಾಲಿ ಸಮಾಜದ ಮೀಸಲಾತಿ ತ್ರಿಸದಸ್ಯ ಸಮಿತಿಗೆ ಹೈಕೋರ್ಟ್ ತಡೆ

ಬೆಂಗಳೂರು, ಆ. 20- ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸಲು ರೂಪಿಸಲಾಗಿದ್ದ ಉನ್ನತ ಹಂತದ ಸಮಿತಿಗೆ ಕರ್ನಾಟಕ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ರಾಜ್ಯ ಸರ್ಕಾರ ಮಾರ್ಚ್ 10, 2021ರಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ನೇತೃತ್ವದ ತ್ರಿಸದಸ್ಯ ಸಮಿತಿಯೊಂದನ್ನು ರಚಿಸಿತ್ತು. ಪ್ರಸಕ್ತ 3ಬಿ ವರ್ಗದಲ್ಲಿರುವ ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರಿಸುವ ಬಗ್ಗೆ ವರದಿ ನೀಡಲು ಸಮಿತಿ ರಚಿಸಲಾಗಿತ್ತು.

ಕಾನೂನಿಗೆ ವಿರುದ್ಧವಾಗಿ ಉನ್ನತ ಮಟ್ಟದ ಸಮಿತಿ ರಚಿಸಿ ರಾಜ್ಯ ಸರ್ಕಾರ ಆದೇಶಿಸಿದೆ, ಇದಕ್ಕೆ ನಿರ್ಬಂಧ ವಿಧಿಸಬೇಕು ಎಂದು ಕೋರಿ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವೆಂಕಟರಾಮಯ್ಯ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ. ವೀರಪ್ಪ ಮತ್ತು ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ ಮಧ್ಯಂತರ ತಡೆಯಾಜ್ಞೆ ಹೊರಡಿಸಿದೆ. ಯಾವುದೇ ಸಮುದಾಯವನ್ನು ಹಿಂದುಳಿದ ವರ್ಗಗಳಿಗೆ ಸೇರಿಸಲು ಇಲ್ಲವೇ ಕೈ ಬಿಡಲು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮಾತ್ರ ಅಧಿಕಾರವಿದೆ ಎಂದು ಅರ್ಜಿಯಲ್ಲಿ ವಾದ ಮಂಡಿಸಲಾಗಿತ್ತು. ರಾಜ್ಯ (2ನೇ ಪುಟಕ್ಕೆ)

# ಪ್ರತ್ಯೇಕ ಲಿಂಗಾಯತ ಧರ್ಮ: ಪಶ್ಚಾತ್ತಾಪವಾಗಿಲ್ಲ

## ರಂಭಾಪುರಿ ಶ್ರೀ ಭೇಟಿ ಮಾಡಿದಾಗ ಏನಾಯಿತು ಎಂಬ ಬಗ್ಗೆ ವಿವರಣೆ ನೀಡಿದ್ದೇನೆ: ಸಿದ್ದರಾಮಯ್ಯ

ಬೆಂಗಳೂರು, ಆ. 20 – ಪ್ರತ್ಯೇಕ ಲಿಂಗಾಯತ ಧರ್ಮ ಸ್ಥಾಪನೆಗೆ ಸಂಬಂಧಿಸಿದಂತೆ ನನಗೆ ಯಾವುದೇ ಪಶ್ಚಾತ್ತಾಪವಾಗಿಲ್ಲ ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಚಿಕ್ಕಮಗಳೂರು ಜಿಲ್ಲಾ ಪ್ರವಾಸದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ರಂಭಾಪುರಿ ಮಠಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ರಂಭಾಪುರಿ ಜಗದ್ಗುರು ಶ್ರೀ ವೀರಸೋಮೇಶ್ವರ ಶಿವಾಚಾರ್ಯ ಶ್ರೀಗಳ ಜೊತೆ ಮಾತನಾಡಿದ್ದರು.

ನಂತರ ಹೇಳಿಕೆ ನೀಡಿದ್ದ ರಂಭಾಪುರಿ ಶ್ರೀಗಳು, ಪ್ರತ್ಯೇಕ ಲಿಂಗಾಯತ ಧರ್ಮ ಸ್ಥಾಪನೆಗೆ ನಾನೇನೂ ಪ್ರಯತ್ನ ಮಾಡಿರಲಿಲ್ಲ. ಕೆಲವರು ದಾರಿ ತಪ್ಪಿಸಿದರು. ಇದರಿಂದ ಪಶ್ಚಾತ್ತಾಪ ಆಗಿದೆ. ಇನ್ನೆಂದೂ ಧರ್ಮದ ವಿಚಾರದಲ್ಲಿ ಪ್ರವೇಶ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ ಎಂದಿದ್ದರು. ಈ ಬಗ್ಗೆ ವರದಿಗಳು ಬಂದ ನಂತರ ಸ್ಪಷ್ಟನೆ ನೀಡಿರುವ ಸಿದ್ದರಾಮಯ್ಯ, ನಾನು ಯಾವುದೇ ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ. ಲಿಂಗಾಯತ ಧರ್ಮ ಮಾಡುವಾಗ ಏನಾಯಿತು ಎಂಬುದನ್ನು ಸ್ವಾಮೀಜಿಗಳಿಗೆ ವಿವರಣೆ ನೀಡಿದ್ದೇನೆ ಎಂದಿದ್ದಾರೆ.

> ಧರ್ಮದ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗಿರಲಿಲ್ಲ. ಶಾಸಕ ಶಾಮನೂರು ಶಿವಶಂಕರಪ್ಪ ವೀರಶೈವ ಧರ್ಮ ಮಾಡಿ ಅಂತ ಅರ್ಜಿ ಕೊಟ್ಟರು. ಅಂದಿನಿಂದ ಇದೆಲ್ಲ ಆರಂಭವಾಯ್ತು.
>
> - ಸಿದ್ದರಾಮಯ್ಯ, ಮಾಜಿ ಸಿಎಂ

ಧರ್ಮ ಒಡೆಯುವ ಉದ್ದೇಶ ಇರಲಿಲ್ಲ. ಶಾಸಕ ಶಾಮನೂರು ಶಿವಶಂಕರಪ್ಪ ಸೇರಿದಂತೆ ಹಲವರು ಮನವಿಗಳನ್ನು ಸಲ್ಲಿಸಿದ್ದರು. ನಂತರ ನಿವೃತ್ತ ನ್ಯಾಯಮೂರ್ತಿ (2ನೇ ಪುಟಕ್ಕೆ)

### ಸಿದ್ದರಾಮಯ್ಯಗೆ ತಪ್ಪಿನ ಅರಿವಾಗಿದೆ: ಎಸ್ಸೆಸ್

ದಾವಣಗೆರೆ, ಆ. 20- ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಈಗ ತಪ್ಪಿನ ಅರಿವಾಗಿದೆ ಎಂದು ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಬಾಳೆಹೊನ್ನೂರಿನ ರಂಭಾಪುರಿ ಮಠಕ್ಕೆ ಚೊಚ್ಚಲ ಭೇಟಿ ನೀಡಿದ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಸ್ವಾಮಿಗಳ ಸಮ್ಮುಖದಲ್ಲಿ ಲಿಂಗಾಯತ-ವೀರಶೈವ ಧರ್ಮ ಒಡೆದ ಆರೋಪದ ಬಗ್ಗೆ ಮಾತನಾಡುತ್ತಾ ಪಶ್ಚಾತಾಪ, ವಿಷಾದ ವ್ಯಕ್ತಪಡಿಸಿದ ಕುರಿತು ಮಾತನಾಡಿದ ಅವರು, ಸಿದ್ದರಾಮಯ್ಯ ಪಶ್ಚಾತ್ತಾಪ ಪಟ್ಟಿದ್ದಾರೆ. ನಾನು (2ನೇ ಪುಟಕ್ಕೆ)

### ರೈಲ್ವೆಗೆ ಐಎಎಸ್ ರೀತಿಯ ಬಡ್ತಿ ಮಾನದಂಡ

ನವದೆಹಲಿ, ಆ. 20 – ಕೇಂದ್ರ ಸರ್ಕಾರ ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳಿಗೆ ಬಡ್ತಿ ನೀಡುವಾಗ ಹಿರಿಯರು ಹಾಗೂ ಕಿರಿಯ ಅಧಿಕಾರಿಗಳಿಂದ ಮೌಲ್ಯಮಾಪನ ಮಾಡಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈಲ್ವೆ ಇಲಾಖೆ ಮುಂದಾಗಿದೆ.

> ಹಿರಿಯ, ಕಿರಿಯ ಅಧಿಕಾರಿಗಳಿಂದ ಮೌಲ್ಯಮಾಪನ

ಆಗಸ್ಟ್ 18ರಂದು ಪತ್ರವೊಂದನ್ನು ಬರೆದಿರುವ ರೈಲ್ವೆ ಮಂಡಳಿ, ಅಧಿಕಾರಿಗಳ ವಾರ್ಷಿಕ ಸಾಧನಾ ವರದಿ ರೂಪಿಸುವಾಗ ಹಲವು ಮೂಲಗಳಿಂದ ಮಾಹಿತಿ ಪಡೆಯಲಾಗುವುದು ಎಂದು ಹೇಳಿದೆ.

ಈ ರೀತಿಯ ವರದಿ ಪಡೆಯುವಾಗ ಮಾಹಿತಿಯನ್ನು ಗೌಪ್ಯವಾಗಿರಿಸಲಾಗುವುದು. ಹಿರಿಯ ಇಲ್ಲವೇ ಕಿರಿಯ ಅಧಿಕಾರಿಗಳು ಸಲ್ಲಿಸುವ ಮಾಹಿತಿಯ ಮೂಲ ಪತ್ತೆ ಮಾಡಲು ಸಾಧ್ಯವಾಗದು ಎಂದು ರೈಲ್ವೆ ಮಂಡಳಿ ತಿಳಿಸಿದೆ. ಪಕ್ಷಪಾತ ರಹಿತವಾಗಿ ಟಿಪ್ಪಣಿ ಹಾಗೂ ಶ್ರೇಯಾಂಕ ನೀಡಲು ವ್ಯವಸ್ಥೆ ಕಲ್ಪಿಸಲಾಗುವುದು. ಇಡೀ ಪ್ರಕ್ರಿಯೆ ಸಂಪೂರ್ಣ ಗೌಪ್ಯವಾಗಿರಲಿದೆ ಎಂದು ತಿಳಿಸಲಾಗಿದೆ.

# ಮಹಿಳಾ ಶೋಷಣೆ ವಿರುದ್ದ ಹೋರಾಟದ ರೂವಾರಿ ಪ್ರೊ. ವಿಮಲದಾಸ್ ವಿಧಿವಶ



ದಾವಣಗೆರೆ, ಆ.20 - ಮಹಿಳೆಯರ ಮೇಲೆ ನಡೆಯುತ್ತಿದ್ದ ಶೋಷಣೆ ವಿರುದ್ಧ ಹೋರಾಟ ನಡೆಸುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಯನ್ನು ಹುಟ್ಟು ಹಾಕಿ, ಆ ಮೂಲಕ ಆರೋಪಿಗಳಿಗೆ ಶಿಕ್ಷೆ ಕೊಡಿಸುವ ಯಶಸ್ಸಿನ ರೂವಾರಿಯಾಗಿದ್ದ ನಗರದ ಪ್ರೊ. ಬಿ. ವಿಮಲಾ ದಾಸ್ ಅವರು ನಿಧನರಾಗಿದ್ದಾರೆ.


ವಯೋಸಹಜ ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದ ವಿಮಲಾ ದಾಸ್ ಅವರು ಇಂದು ರಾತ್ರಿ 10 ಗಂಟೆಗೆ ಕೊನೆಯುಸಿರೆಳೆದರು. ಅವರಿಗೆ ಸುಮಾರು 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಎಸ್.ಎಸ್. ಬಡಾವಣೆಯ ಗಂಗೂಬಾಯಿ ಹಾನಗಲ್ ಉದ್ಯಾನವನದ ಎದುರು ಇರುವ ಅವರ ನಿವಾಸದಲ್ಲಿಡಲಾಗಿದ್ದು, ನಾಳೆ ದಿನಾಂಕ 21ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ವೈಕುಂಠಧಾಮದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಸಂಕ್ಷಿಪ್ತ ಪರಿಚಯ** : ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಸುದೀರ್ಘ ಅವಧಿಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ವಿಮಲಾ ದಾಸ್, ಮಹಿಳೆಯರ ಶಿಕ್ಷಣಕ್ಕೆ ಮತ್ತೊಂದು ಹೆಸರು ಎ.ವಿ.ಕೆ ಕಾಲೇಜು ಎನ್ನುವಷ್ಟರ ಮಟ್ಟಿಗೆ ಆ ಕಾಲೇಜಿಗೆ ಕೀರ್ತಿ ತಂದುಕೊಡುವಲ್ಲಿ ಕಾಲೇಜು ಅಭಿವೃದ್ಧಿಗೆ ಶ್ರಮಿಸಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಮಹಿಳೆಯರು ವಿದ್ಯಾಭ್ಯಾಸ ಮಾಡಲು ಸುರಕ್ಷಿತ ಕಾಲೇಜು ಎಂಬ ಹೆಗ್ಗಳಿಕೆಯನ್ನು ಎವಿಕೆ ಕಾಲೇಜು ಪಡೆದಿದೆ ಎಂದರೆ, ಅದರ ಹಿಂದೆ ವಿಮಲಾ ದಾಸ್ ಅವರ ಶ್ರಮ ಇದೆ. 'ಗೃಹ ವಿಜ್ಞಾನ' ವಿಷಯದ ಶಿಕ್ಷಣ ವಿಭಾಗವನ್ನು ಎವಿಕೆ ಕಾಲೇಜಿಗೆ ತಂದು, ಮಧ್ಯ ಕರ್ನಾಟಕದ ಭಾಗಕ್ಕೆ ಪರಿಚಯಿಸಿದ್ದೂ ಕೂಡಾ ವಿಮಲಾ ದಾಸ್.

**ಶೋಷಣೆ ವಿರುದ್ಧ ಹೋರಾಟ** : ವರದಕ್ಷಿಣೆ ಕಿರುಕುಳದಿಂದ ಮಹಿಳೆಯರ ಆತ್ಮಹತ್ಯೆ, ಕೊಲೆ ಪ್ರಕರಣಗಳು 1980ರ ದಶಕದಲ್ಲಿ ನಗರದಲ್ಲಿ ಹೆಚ್ಚಾಗಿದ್ದವು. ಆ ಸಂದರ್ಭದಲ್ಲಿ ಅಂತಹ ಪ್ರಕರಣಗಳ ವಿರುದ್ಧ ಹೋರಾಟ ನಡೆಸುವ ನಿಟ್ಟಿನಲ್ಲಿ ಮಹಿಳಾ ಉಪನ್ಯಾಸಕರು, ಸಾಮಾಜಿಕ ಕಾರ್ಯಕರ್ತೆಯರನ್ನು ಕಲೆ ಹಾಕಿ ಜಾಗೃತ ಮಹಿಳಾ ಸಂಘವನ್ನು ಅಸ್ತಿತ್ವಕ್ಕೆ ತಂದಿದ್ದ ವಿಮಲಾ ದಾಸ್, ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯಗಳ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿದ್ದರು.

ವರದಕ್ಷಿಣೆ ಕಿರುಕುಳದಿಂದ ಸಾವು ಎನ್ನುವ ಪ್ರಕರಣ ಬೆಳಕಿಗೆ (2ನೇ ಪುಟಕ್ಕೆ)

# ಹರಪನಹಳ್ಳಿ : ಜಾತಿ ವ್ಯವಸ್ಥೆ ಇರುವವರೆಗೆ ಮೀಸಲಾತಿ ಇರುತ್ತದೆ

ಹರಪನಹಳ್ಳಿ, ಆ. 20- ಜಾತಿ ವ್ಯವಸ್ಥೆ ಇರುವವರೆಗೆ ಮೀಸಲಾತಿ ಇರುತ್ತದೆ ಎಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಸಮತಾ ರೆಸಾರ್ಟ್‌ನಲ್ಲಿ 'ಸಂವಿಧಾನ ಓದು ಅಭಿಯಾನ' ಸಮಿತಿ, ತಾಲ್ಲೂಕು ಕಾನೂನು ಸೇವಾ ಸಮಿತಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರುಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಓದು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಾಲ್ಮೀಕಿ ಶ್ರೀಗಳು ಕಳೆದ 193 ದಿನಗಳಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರಿಗೆ ಗೌರವ ಕೊಟ್ಟು ಅವರ ಜೊತೆ ಮಾತನಾಡಿ, ಸರ್ಕಾರ ರಾಜಕೀಯ ಇಚ್ಛಾಶಕ್ತಿ ತೋರಿಸಿ ಎಸ್ಟಿ ಸಮುದಾಯಕ್ಕೆ ಶೇ.7.5 ರಷ್ಟು ಮೀಸಲಾತಿ ಹೆಚ್ಚಿಸಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಮನೆ ಮನೆಗೂ ಸೀರೆ, ಪ್ಯಾನ್, ಫ್ರಿಡ್ಜ್, ಟಿ.ವಿ.ಸೇರಿದಂತೆ ಹಲವು ವಸ್ತುಗಳ ಅಮಿಷವನ್ನು ಒಡ್ಡುತ್ತಿವೆ ಆದರೆ ದೇಶದ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ವಿಫಲವಾಗಿವೆ. ನಮ್ಮನ್ನಾಳುವ ಸರ್ಕಾರಗಳು ಸಂವಿಧಾನವನ್ನು ತಲುಪಿಸುವಲ್ಲಿ ವಿಫಲವಾಗಿವೆ. ನಾವು ಕೂಡ ಸಂವಿಧಾನ ಓದಿ ಅರ್ಥೈಸಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದೇವೆ. ಹರ್ ಘರ್ ತಿರಂಗ ಬದಲು, ಮನೆ ಮನೆಗೂ ಸಂವಿಧಾನವನ್ನು ತಲುಪಿಸುವ ಕೆಲಸ ಆಗಬೇಕು ಎಂದರು.



**ಸಂವಿಧಾನ ಓದು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್**

ಎಸಿಬಿ ರದ್ದುಗೊಳಿಸಿ ಆದೇಶ ಹೊರಡಿಸಿದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಸ್ವಾಗತಿಸುತ್ತೇನೆ ಎಂದ ಅವರು, ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸಬೇಕು. ನಾಡಿನಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಲೋಕಾಯುಕ್ತ ಸಂಸ್ಥೆ ಬಲಪಡಿಸುವುದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಆ ನಿಟ್ಟಿನಲ್ಲಿ ಹೈಕೋರ್ಟ್ ತೀರ್ಪಿನ ಪ್ರಕಾರ ಸರ್ಕಾರ ನಡೆದುಕೊಳ್ಳಬೇಕು ಎಂದರು.

ಒಂದೊಂದು ಧರ್ಮಕ್ಕೆ ಒಂದೊಂದು ಗ್ರಂಥಗಳಿವೆ. ಆದರೆ, ಭಾರತಕ್ಕೆ ಮಹಾಗ್ರಂಥ ಸಂವಿಧಾನವಾಗಿದ್ದು, ಅದರ ಸಂಪೂರ್ಣ ಚರಿತ್ರೆಯನ್ನು ತಿಳಿದುಕೊಂಡು ಅದರ ಆಶಯಗಳನ್ನು ಅಳವಡಿಸಿಕೊಂಡು ಬದುಕಿದರೆ ದೇಶಕ್ಕೂ, ನಮಗೂ ಒಳ್ಳೆಯದಾಗುತ್ತದೆ ಎಂದರು.

ಹೈಕೋರ್ಟ್ ವಕೀಲ ಅನಂತನಾಯ್ಕ ಮಾತನಾಡಿ, ಇಂದಿನ ವಿದ್ಯಾರ್ಥಿ ಯುವ ಸಮೂಹಕ್ಕೆ ಸಂವಿಧಾನದ ಜಾಗೃತಿ ಅವಶ್ಯಕತೆ ಇದ್ದು ಕಳೆದ ಮೂರು ವರ್ಷಗಳಿಂದ ರಾಜ್ಯದ ಹಲವು ಕಡೆಗಳಲ್ಲಿ ನಿ.ನ್ಯಾ.ಎಚ್.ಎನ್. ನಾಗಮೋಹನದಾಸ್‌ರವರ ಪುಸ್ತಕ ಸಂವಿಧಾನ ಓದು ಅಭಿಯಾನ ಯಶಸ್ವಿಯಾಗಿದ್ದು, ಇದರ ಸದುಪಯೋಗವನ್ನು ಮುಂದಿನ ಪೀಳಿಗೆ ಪಡೆಯಲಿ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಎಚ್.ಎಂ. ಅಶೋಕ, ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ, ಸಂವಿಧಾನ ಓದು ಅಭಿಯಾನ ಸಮಿತಿ ಸದಸ್ಯ ಬಿ. ರಾಜಶೇಖರಮೂರ್ತಿ, ಬುಡಕಟ್ಟು ಸಮುದಾಯಗಳ ಐಕ್ಯತೆ ವೇದಿಕೆಯ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಭೀಮಪ್ಪ, ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ತಾಲ್ಲೂಕು ಅಧ್ಯಕ್ಷ ಚಂದ್ರಪ್ಪ ತಳವಾರ, ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಡಿ. ರಾಮನ ಮಲಿ, ಸಾಹಿತಿ ಇಸ್ಮಾಯಲ್ ಎಲಿಗಾರ್, ಮುಖಂಡರಾದ ಕಣಿವಿಹಳ್ಳಿ ಮಂಜುನಾಥ, ಪುಣಬಗಟ್ಟಿ ನಿಂಗಪ್ಪ, ವಿಶ್ವನಾಥ ಸೋಗಿ ಗಣೇಶ್, ಈಶ್ವರನಾಯ್ಕ, ರವಿನಾಯ್ಕ, ವೆಂಕಟೇಶನಾಯ್ಕ, ಕೆ.ಡಿ. ಅಂಜಿನಪ್ಪ ಸೇರಿದಂತೆ ಇತರರು ಇದ್ದರು.

# ತಿಮ್ಮಪ್ಪನ ಸನ್ನಿಧಿಯಲ್ಲಿ ಬಿಜೆಪಿ ಚುನಾವಣಾ ರೂಪುರೇಷೆ

**ಸೆಪ್ಟೆಂಬರ್ ತಿಂಗಳಲ್ಲಿ ಕಮಲದ ಮೂರು ರಥಗಳು ಪ್ರತ್ಯೇಕವಾಗಿ ರಾಜ್ಯ ಪ್ರವಾಸ**

ಬೆಂಗಳೂರು, ಆ. 20 - ಮುಂಬರುವ ವಿಧಾನ ಸಭೆ ಚುನಾವಣೆ ಎದುರಿಸುವ ನೀಲನಕ್ಷೆಯನ್ನು ರಾಜ್ಯ ಬಿಜೆಪಿ ಮುಖಂಡರು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ರೂಪಿಸಿದ್ದಾರೆ.

ತಿಮ್ಮಪ್ಪನ ಸನ್ನಿಧಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸೆಪ್ಟೆಂಬರ್ ತಿಂಗಳಲ್ಲಿ ಕಮಲದ ಮೂರು ರಥಗಳು ಪ್ರತ್ಯೇಕವಾಗಿ ರಾಜ್ಯ ಪ್ರವಾಸ ಕೈಗೊಳ್ಳಲಿವೆ. ಕೇಂದ್ರ ಸಂಸದೀಯ ಮಂಡಳಿ ಸದಸ್ಯರಾಗಿ ಆಯ್ಕೆಗೊಂಡಿರುವ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ್ ಅವರು ಎರಡು ದಿನಗಳ ತಿರುಪತಿ ಪ್ರವಾಸ ಕೈಗೊಂಡಿದ್ದರು.

ಆ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಸ್ಥಿತಿಗತಿ ಬಗ್ಗೆ ಸಮಾಲೋಚಿಸಿದ್ದಾರೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಿಗೆ ಕೆಲವು ಸಲಹೆಗಳನ್ನು ನೀಡಿದ್ದಾರೆ.

ಕಾರ್ಯಕರ್ತರನ್ನು ಒಗ್ಗೂಡಿಸಬೇಕು. ಜನರ ಮನವೊಲಿಸಬೇಕು. ನಮ್ಮ ಕಾರ್ಯಕ್ರಮಗಳನ್ನು ಅವರಿಗೆ ತಲುಪಿಸಬೇಕು. ಇನ್ನುಮುಂದೆ ವಿಶ್ರಮಿಸುವುದು ಬೇಡ. ಪ್ರವಾಸ ಕೈಗೊಳ್ಳೋಣ ಎಂದು ತಿಳಿಸಿದ್ದಾರೆ. ಸಂಘರ್ಷ ಮಾಡುತ್ತಿರುವ ಯುವ ಸಮುದಾಯಕ್ಕೆ ಕಿವಿ ಮಾತು ಹೇಳಿ ವಿನಾಕಾರಣ ವಿವಾದ ಸೃಷ್ಟಿಸದಂತೆ ಮನವರಿಕೆ ಮಾಡಿಕೊಡಿ ಎಂದೂ ಹೇಳಿದ್ದಾರೆ. ಅಲ್ಲದೇ, ತಿಮ್ಮಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಚುನಾವಣಾ ತಯಾರಿ ಮತ್ತು ಪ್ರತಿಪಕ್ಷಗಳನ್ನು ಎದುರಿಸುವುದು ಹೇಗೆ ಎಂಬುದರ ಬಗ್ಗೆ ರೂಪುರೇಷೆ ಸಿದ್ಧಪಡಿಸಿದರು. ಅಂದು ತಿರುಪತಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಇಂದು ರಾಜ್ಯ ಬಿಜೆಪಿ ಕಚೇರಿಯಲ್ಲಿ ಮುಖಂಡರು ಸಭೆ ಸೇರಿ ಪ್ರವಾಸದ ರೂಪುರೇಷೆ ಅಂತಿಮಗೊಳಿಸಿದ್ದಾರೆ.

ಗಣೇಶ ಹಬ್ಬ ಮುಗಿಯುತ್ತಿದ್ದಂತೆ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಪ್ರತ್ಯೇಕ ಸಾರಥ್ಯದಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಈ ಮೊದಲು ಕಟೀಲ್ ಮತ್ತು ಬೊಮ್ಮಾಯಿ ಅವರ ಸಾರಥ್ಯದಲ್ಲಿ ಪ್ರವಾಸ ಕೈಗೊಳ್ಳುವ ತೀರ್ಮಾನಕ್ಕೆ ಬರಲಾಗಿತ್ತು. ಅದನ್ನು ಇದೀಗ ಬದಲಾವಣೆ ಮಾಡಿ ಯಡಿಯೂರಪ್ಪ ಮಾರ್ಗದರ್ಶನದಂತೆ ರಥಯಾತ್ರೆ ನಡೆಯಲಿದೆ.

ಇದೇ ಸಂದರ್ಭದಲ್ಲಿ ರಾಜ್ಯದ 7 ಕೇಂದ್ರಗಳಲ್ಲಿ ಬಿಜೆಪಿ ಆಡಳಿತಕ್ಕೆ 3 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಜನೋತ್ಸವದ ಬೃಹತ್ ಸಮಾವೇಶಗಳು ನಡೆಯಲಿವೆ.

## ಹಾಸ್ಟೆಲ್‌ಗಳ ಸುಧಾರಣೆಗೆ 250 ಕೋಟಿ

**(1ನೇ ಪುಟದಿಂದ)** ಕಲ್ಪಿಸಲಾಗುವುದು. ಈ ಸಂಘದಲ್ಲಿ ಹಿಂದುಳಿದ ವರ್ಗದ ಯುವಕರಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯದ 5 ಶೈಕ್ಷಣಿಕ ಕೇಂದ್ರಗಳಲ್ಲಿ 1000 ಮಕ್ಕಳಿಗೆ ಬಹುಮಹಡಿ ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗುತ್ತಿದೆ. ಈ ಯೋಜನೆಯನ್ನು 5000 ಮಕ್ಕಳ ಸಾಮರ್ಥ್ಯಕ್ಕೇರಿಸುವ ಗುರಿ ಇದ್ದು, ಹಣವನ್ನು ಒದಗಿಸಲಾಗಿದೆ. ದೇವರಾಜ ಅರಸು ಅವರ ಹೆಸರಿನಲ್ಲಿ ಪಿಹೆಚ್‌ಡಿ ಮಾಡುವ ವಿದ್ಯಾರ್ಥಿಗಳಿಗೆ ಒಟ್ಟು 4 ಕೋಟಿ ರೂ. ಅನುದಾನ ಬಿಡುಗಡೆ ಮಾಡಿ ಆದೇಶ ನೀಡಲಾಗಿದೆ. ವಿದೇಶದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ 10 ಕೋಟಿ ರೂ. ಅನುದಾನ ಹೆಚ್ಚಿಗೆ ನೀಡಲಾಗಿದೆ ಎಂದರು.

ನಾರಾಯಣ ಗುರು ಅವರ ಹೆಸರಿನಲ್ಲಿ ತಲಾ 30 ಕೋಟಿ ರೂ. ವೆಚ್ಚದಲ್ಲಿ 4 ಶಾಲೆಗಳನ್ನು ಪ್ರಾರಂಭಿಸಲಾಗುವುದು. ಹಿಂದುಳಿದ ವರ್ಗದ ವಿವಿಧ ನಿಗಮ, ಮಂಡಳಿಗೆ ಸುಮಾರು 800 ಕೋಟಿ ರೂ.ಗಳ ಅನುದಾನವನ್ನು ಅಧಿಕವಾಗಿ ನೀಡಲಾಗಿದೆ.

ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಸ್ತ್ರೀ ಶಕ್ತಿ ಸಂಘಗಳಿಗೆ ಆರ್ಥಿಕ ಸೌಲಭ್ಯ, ಬ್ಯಾಂಕ್ ಜೋಡಣೆ, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ 5 ಲಕ್ಷ ಮಹಿಳೆಯರಿಗೆ ಅನುಕೂಲ ಕಲ್ಪಿಸಲಾಗುತ್ತಿದೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಠ-ಮಾನ್ಯಗಳಿಗೆ 129 ಕೋಟಿ ರೂ.ಗಳನ್ನು ನೀಡಲಾಗಿದೆ.

ದೇವರಾಜ ಅರಸು ಅವರ ವಿಚಾರಗಳನ್ನು, ಕನಸುಗಳನ್ನು ನನಸು ಮಾಡುವುದು ಸರ್ಕಾರದ ಉದ್ದೇಶವಾಗಿದೆ. ಅವರ ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಸಾಕಾರಗೊಳಿಸುವುದು ಎಂದು ತಿಳಿಸಿದರು.

## ಭಾವೆ ಭೂದಾನ ಮೀರಿಸುವಂತೆ ಅರಸು ಭೂ ಸುಧಾರಣೆ



**(1ನೇ ಪುಟದಿಂದ)** ಮೂಢನಂಬಿಕೆ, ಕಂದಾಚಾರಗಳು ಇನ್ನೂ ಜಾರಿಯಲ್ಲಿವೆ. ಮುಟ್ಟಾದ ಮಹಿಳೆಯರನ್ನು ಹಟ್ಟಿಯಿಂದ ದೂರವಿರಿಸುವ ಅನಿಷ್ಟ ಪದ್ಧತಿಯನ್ನು ತೊಲಗಿಸಲು ನಿರಂತರವಾಗಿ ಶ್ರಮಿಸುತ್ತಿದ್ದೇವೆ ಎಂದರು.

ವೇದಿಕೆ ಮೇಲೆ ದೂಡಾ ಅಧ್ಯಕ್ಷ ಕೆ.ಎ. ಸುರೇಶ್, ಜಿಲ್ಲಾ ಪಂಚಾಯ್ತಿ ಸಿಇಒ ಚೆನ್ನಪ್ಪ, ಎಸ್ಪಿ ಸಿ.ಬಿ. ರಿಷ್ಯಂತ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ರೇಷ್ಮ ಕೌಸರ್, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ರಮೇಶ್.ಆರ್ ಮದರಿ, ಅಲ್ಪಸಂಖ್ಯಾತ ಇಲಾಖೆಯ ಮಠದ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜಾನಾಯ್ಕ, ಅಂಬೇಡ್ಕರ್ ನಿಗಮದ ಅಧಿಕಾರಿ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ಲಿಂಗಾಯತ ಧರ್ಮ: ಪಶ್ಚಾತ್ತಾಪವಾಗಿಲ್ಲ

**(1ನೇ ಪುಟದಿಂದ)** ನಾಗಮೋಹನ ದಾಸ್ ಸಮಿತಿ ವರದಿ ನೀಡಿತ್ತು. ಆಗಲೇ ಇವೆಲ್ಲವೂ ಆರಂಭವಾಯಿತು ಎಂದಿದ್ದಾರೆ.

ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಹಿಂದೂ ಧರ್ಮದಿಂದ ಲಿಂಗಾಯತರನ್ನು ಪ್ರತ್ಯೇಕಿಸಿ, ಪ್ರತ್ಯೇಕ ಧರ್ಮ ಮಾಡಲು ಮುಂದಾಗಲಾಗಿತ್ತು. ಈ ಬಗ್ಗೆ ವೀರಶೈವ – ಲಿಂಗಾಯತ ಸಮುದಾಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ನಂತರ ನಡೆದ ಚುನಾವಣೆಯಲ್ಲಿ ಈ ವಿಷಯ ಕಾಂಗ್ರೆಸ್‌ಗೆ ಹೊಡೆತ ನೀಡಿತು ಎಂದೂ ವಿಶ್ಲೇಷಿಸಲಾಗಿತ್ತು.

ಈ ನಡುವೆ ಹೇಳಿಕೆ ನೀಡಿರುವ ರಾಜ್ಯ ಬಿಜೆಪಿ, ಲಿಂಗಾಯತ ಸ್ವತಂತ್ರ ಧರ್ಮದ ಕುರಿತು ಸಿದ್ದರಾಮಯ್ಯ ಮತಗಳಿಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸುತ್ತಿದ್ದಾರೆ ಎಂದು ಟೀಕಿಸಿದೆ.

ಧರ್ಮ ವಿಭಜನೆ ವಿಚಾರದಲ್ಲಿ ನನ್ನನ್ನು ದಾರಿ ತಪ್ಪಿಸಿದರು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ದಾರಿ ತಪ್ಪಿಸಿದವರು ಅವರ ಜೊತೆಯಲ್ಲೇ ಇದ್ದುಕೊಂಡು ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದಾರೆ. ಅವರಿಂದ ರಾಜೀನಾಮೆ ಪಡೆಯುತ್ತೀರಾ? ಎಂದು ಬಿಜೆಪಿ ಪ್ರಶ್ನಿಸಿದೆ.

## ಸಿದ್ದರಾಮಯ್ಯಗೆ ತಪ್ಪಿನ ಅರಿವಾಗಿದೆ: ಎಸ್ಸೆಸ್

**(1ನೇ ಪುಟದಿಂದ)** ಮತ್ತೊಮ್ಮೆ ಧರ್ಮ ಒಡೆಯುವ ಪ್ರಯತ್ನಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲಿಗೆ ಮುಗಿತು ಎಂದು ಎಸ್ಸೆಸ್ ಹೇಳಿದರು.

ಸಿದ್ದರಾಮಯ್ಯನಿಗೆ ಒಳ್ಳೆಯ ಬುದ್ದಿ ಬಂದಿದೆ. ಅದರಲ್ಲಿ ಅವರ ಪಾತ್ರ ಏನು ಇಲ್ಲ. ಬೇರೆಯವರ ಒತ್ತಡ ಇತ್ತು. ಆ ಆರೋಪ ಮಾತ್ರ ಅವರ ಮೇಲೆ ಬಂತು ಅಷ್ಟೇ ಎಂದರು.

ಯಡಿಯೂರಪ್ಪ ನವರಿಗೆ ಸಂಸದೀಯ ಸ್ಥಾನ ನೀಡಿರುವ ಬಗ್ಗೆ ಮಾತನಾಡಿದ ಎಸ್ಸೆಸ್, ಯಡಿಯೂರಪ್ಪ ಒಬ್ಬರಿಂದ ಏನೂ ಮಾಡೋಕೆ ಆಗೋದಿಲ್ಲ.

ಸರ್ಕಾರ ನಾವು ರಚನೆ ಮಾಡುತ್ತೇವೆ, ನಮ್ಮ ಸರ್ಕಾರವೇ ಬರುತ್ತೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಲ್ಲದೇ, ತಾವು ಈ ಬಾರಿ ಮತ್ತೊಮ್ಮೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ ಎಂದೂ ಸಹ ತಿಳಿಸಿದರು.

## ಮಹಿಳಾ ಶೋಷಣೆ ವಿರುದ್ದ ಹೋರಾಟದ ರೂವಾರಿ ವಿಮಲದಾಸ್ ವಿಧಿವಶ

**(1ನೇ ಪುಟದಿಂದ)** ಬರುತ್ತಿದ್ದಂತೆ, ಅದರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿ ಆರೋಪಿಗಳಿಗೆ ಶಿಕ್ಷೆ ಕೊಡಿಸುವ ತನಕವೂ ವಿಮಲಾ ದಾಸ್ ಹೋರಾಟ ನಡೆಸುತ್ತಿದ್ದರು. ಇಂತಹ ಪ್ರಕರಣಗಳ ಪೈಕಿ ಒಂದು ಕೇಸ್ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ ಸಂದರ್ಭದಲ್ಲಿ ಆ ಕೋರ್ಟಿನಿಂದ ಶಿಕ್ಷೆ ಕೊಡಿಸಿದ ಕೀರ್ತಿಗೆ ವಿಮಲಾ ದಾಸ್ ಪಾತ್ರರಾಗಿದ್ದರು. ಇದರಿಂದ ಜಾಗೃತ ಮಹಿಳಾ ಸಂಘ ಬಲಿಷ್ಠ ಸಂಘಟನೆ ಎಂಬ ಹೆಗ್ಗಳಿಕೆ ಪಡೆದಿದೆ. ಇಂದಿಗೂ ಕೂಡಾ ಆ ಸಂಘಟನೆ ಸಾಮಾಜಿಕ ಚಟುವಟಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಮುಂದುವರೆದಿದೆ.

**ಸಂತಾಪ :** ವಿಮಲಾ ದಾಸ್ ಅವರ ನಿಧನದ ವಿಷಯ ತಿಳಿಯುದ್ದಂತೆ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು, ಗಣ್ಯರು ಮೃತರ ನಿವಾಸಕ್ಕೆ ಭೇಟಿ ನೀಡಿ, ಮೃತರ ಪಾರ್ಥಿವ ಶರೀರಕ್ಕೆ ಪುಷ್ಪ ಗುಚ್ಛವನ್ನಿರಿಸಿ ಅಂತಿಮ ನಮನ ಸಲ್ಲಿಸಿದರು.

ಜಾಗೃತ ಮಹಿಳಾ ಸಂಘದ ಅಧ್ಯಕ್ಷರಾಗಿ ಇಂದಿಗೂ ಸೇವೆ ಸಲ್ಲಿಸುತ್ತಿದ್ದ ವಿಮಲಾ ದಾಸ್ ಅವರ ಸಾಮಾಜಿಕ ಸೇವೆಯನ್ನು ನ್ಯಾಯವಾದಿಯೂ ಆಗಿರುವ ಆ ಸಂಘದ ಕಾರ್ಯದರ್ಶಿ ಶ್ರೀಮತಿ ಸಿ.ಎಂ. ಅಮೀನಾ ಬಾನು ಮೆಲುಕು ಹಾಕಿದ್ದಾರೆ. ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಮಾ ವೀರಭದ್ರಪ್ಪ, ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಅವರುಗಳು ವಿಮಲಾ ದಾಸ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

## ಜೈಲಿನಲ್ಲಿರುವ ಮಹಿಳೆಯರು ಹಬ್ಬಗಳಲ್ಲಿ ತಾಳಿ ಧರಿಸಲು ಅನುಮತಿ

ಲಖ್ನೌ, ಆ. 20 – ಹಿಂದೂ ಹಬ್ಬಗಳ ದಿನದಂದು ಜೈಲಿನಲ್ಲಿರುವ ವಿವಾಹಿತ ಮಹಿಳೆಯರು ತಾಳಿ ಧರಿಸಲು ಉತ್ತರ ಪ್ರದೇಶ ಸರ್ಕಾರ ಅನುಮತಿ ನೀಡಿದೆ. ಇದಕ್ಕಾಗಿ ಹೊಸ ಜೈಲು ಮಾರ್ಗಸೂಚಿ ರೂಪಿಸಲಾಗಿದೆ.

ಬ್ರಿಟಿಷರ ಕಾಲದಲ್ಲಿ 1941ರಲ್ಲಿ ರೂಪಿಸಲಾಗಿದ್ದ ನಿಯಮಗಳು ಅಪ್ರಸ್ತುತವಾಗಿವೆ. ಹೀಗಾಗಿ ಇವುಗಳಿಗೆ ಬದಲಾವಣೆ ತರುತ್ತಿರುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಹೊಸ ಮಾರ್ಗಸೂಚಿಗೆ ರಾಜ್ಯ ಸಂಪುಟ ಈಗಾಗಲೇ ಒಪ್ಪಿಗೆ ನೀಡಿದೆ.

ಹೆಚ್ಚು ಮಾನವೀಯ ಹಾಗೂ ಸಂವೇದನೆ ಹೊಂದುವ ರೀತಿಯಲ್ಲಿ ಮಾರ್ಗಸೂಚಿ ರೂಪಿಸಲಾಗಿದೆ ಎಂದು ಸಚಿವ ಧರ್ಮವೀರ್ ಪ್ರಜಾಪತಿ ಹೇಳಿದ್ದಾರೆ.

ಹೊಸ ಮಾರ್ಗಸೂಚಿಯ ಅನ್ವಯ ಮಹಿಳೆಯರು ತಾಳಿ ಕಟ್ಟಿಕೊಳ್ಳಲು ಅನುಮತಿ ನೀಡಲಾಗಿದೆ. ಈ ಹಿಂದೆ ಕೇವಲ ಬಳೆ ಹಾಗೂ ಮೂಗು ಬೊಟ್ಟುಗಳನ್ನು ಧರಿಸಲು ಮಾತ್ರ ಅನುಮತಿ ನೀಡಲಾಗಿತ್ತು.


# ಪ್ರೊ. ಬಿ. ವಿಮಲಾ ದಾಸ್ ನಿಧನ



#1111, ವಿಶ್ವೇಶ್ವರಯ್ಯ ರಸ್ತೆ, ಗಂಗೂಬಾಯಿ ಹಾನಗಲ್ ಉದ್ಯಾನವನದ ಎದುರು, ಎಸ್.ಎಸ್. ಬಡಾವಣೆ, ದಾವಣಗೆರೆ ವಾಸಿ

**ಪ್ರೊ. ಬಿ. ವಿಮಲಾ ದಾಸ್**

ನಿವೃತ್ತ ಪ್ರಾಂಶುಪಾಲರು, ಎ.ವಿ.ಕೆ ಮಹಿಳಾ ಕಾಲೇಜು ಹಾಗೂ ಅಧ್ಯಕ್ಷರು, ಜಾಗೃತ ಮಹಿಳಾ ಸಂಘ (ರಿ), ದಾವಣಗೆರೆ

ಇವರು ದಿನಾಂಕ 20.8.2022ರ ಶನಿವಾರ ರಾತ್ರಿ 10 ಗಂಟೆಗೆ ವಯೋಸಹಜ ಅನಾರೋಗ್ಯದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 89 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.8.2022ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗದವರು

ಪತಿ: **ಬಿ.ಎಸ್. ದಾಸ್**

ಮಗ : **ಡಾ.ಬಿ.ವಿನಯ್ ದಾಸ್** ಸೊಸೆ : **ಶ್ರೀಮತಿ ಕವಿತ ವಿನಯ ದಾಸ್** ಮತ್ತು


ಮಗ : **ಬಿ. ವಿಜಯ ದಾಸ್**, ಸೊಸೆ : **ಡಾ. ಕೃತಿ ಪಿ.ಆರ್ ವಿಜಯ ದಾಸ್**

ಮೊಮ್ಮಕ್ಕಳು : **ಶಿಬಾನಿ, ಮಿಥಾಲಿ, ತನ್ವಿ** ಹಾಗೂ

**ಪದಾಧಿಕಾರಿಗಳು ಸದಸ್ಯರು ಮತ್ತು ಸಿಬ್ಬಂದಿ ವರ್ಗ**

**ಜಾಗೃತ ಮಹಿಳಾ ಸಂಘ, ದಾವಣಗೆರೆ.**

# ಹಿರೇಕೋಗಲೂರು ಗೌಡ್ರ ವೀರಭದ್ರಪ್ಪ ನಿಧನ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ, 856/16ರ ವಾಸಿ

**ಹಿರೇಕೋಗಲೂರು ಗೌಡ್ರ ವೀರಭದ್ರಪ್ಪ**

ಇವರು ದಿನಾಂಕ 20.8.2022ರ ಶನಿವಾರ ಮಧ್ಯಾಹ್ನ 1.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 77 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ **ಮೃತರ ಪಾರ್ಥಿವ ಶರೀರವನ್ನು ದಾವಣಗೆರೆ ಮೃತರ ಸ್ವಗೃಹದಲ್ಲಿ ಬೆಳಿಗ್ಗೆ 9 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು.** ನಂತರ ಅಂತ್ಯಕ್ರಿಯೆಯನ್ನು ದಿನಾಂಕ 21.8.2022ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ಹಿರೇಕೊಗಲೂರು ಗ್ರಾಮದಲ್ಲಿ ನೆರವೇರಿಸಲಾಗುವುದು.


**ದುಃಖತಪ್ತ ಕುಟುಂಬ ವರ್ಗ**


### ಜಿ. ವೀರಭದ್ರಪ್ಪ ನಿಧನ



ಶಿವಕುಮಾರ ಸ್ವಾಮಿ ನಗರ, 1ನೇ ಹಂತ, ದಾವಣಗೆರೆ ವಾಸಿ, ಶ್ರೀ ಈಶ್ವರ ವಿನಾಯಕ ಟ್ರಸ್ಟ್‌ನ ಸದಸ್ಯರಾದ ಜಿ. ವೀರಭದ್ರಪ್ಪ (76) ಇವರು ದೈವಾಧೀನರಾಗಿರುತ್ತಾರೆ. ಇವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ದಿನಾಂಕ : 21.8.2022 ರಂದು ಅವರ ಹುಟ್ಟೂರಾದ ಹಿರೇಕೋಗಲೂರಿನಲ್ಲಿ ನೆರವೇರಲಿದೆ. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಇವರ ಪಾರ್ಥಿವ ಶರೀರ ವನ್ನು ಅವರ ಸ್ವಗೃಹದಲ್ಲಿ 21.8.2022ರ ಬೆಳಿಗ್ಗೆ 8 ಗಂಟೆಯವರೆಗೆ ಇಡಲಾಗುತ್ತದೆ. (ಸೆಂಟ್ ಜಾನ್ಸ್ ಪ್ರೌಢಶಾಲೆ ಸಮೀಪದಲ್ಲಿ) ಎಂದು ಈಶ್ವರ ವಿನಾಯಕ ಟ್ರಸ್ಟ್‌ನ ಗೌರವ ಅಧ್ಯಕ್ಷರು, ಅಧ್ಯಕ್ಷರು & ಟ್ರಸ್ಟಿನ ಸದಸ್ಯರು ತಿಳಿಸಿರುತ್ತಾರೆ.

### ಯಲವಟ್ಟಿ ಗ್ರಾಮದ ಹಂಕ್ಯಾನಾಯ್ಕ ನಿಧನ



ಹರಿಹರ ತಾಲ್ಲೂಕು ಯಲವಟ್ಟಿ ಗ್ರಾಮದ ವಾಸಿ ಹಂಕ್ಯಾನಾಯ್ಕ (90) ಇವರು ದಿನಾಂಕ 20.8.2022ರ ಶನಿವಾರ ಸಂಜೆ 5.30ಕ್ಕೆ ನಿಧನರಾದರು. ತಾ.ಪಂ. ಮಾಜಿ ಸದಸ್ಯರು ಹಾಗೂ ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕ ಅಜ್ಜನಾಯ್ಕ ಅವರ ಚಿಕ್ಕಪ್ಪನವರಾದ ಮೃತರು ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.8.2022ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಯಲವಟ್ಟಿ ಗ್ರಾಮದಲ್ಲಿ ನೆರವೇರಲಿದೆ.


# ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿ., (ರಿ.)

# 491/1, 49/2ಎ, ವಸಂತ ರೋಡ್, ದಾವಣಗೆರೆ-577 001. ದೂರವಾಣಿ : 08192-234534

**Shri Suparshwanath Jain Minority Souharda Sahakari Niyamitha (R.)**

Regd.: DR/DVG/RSR/SL.NO/4841/2017-18 E-mail : ssjmssndvg@gmail.com

## 5 ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಇ60.ಎಲ್‌ಎಮ್2021 (ಇ) ಬೆಂಗಳೂರು, ದಿನಾಂಕ 10.08.2022 ಇದರಂತೆ 2021-22ನೇ ಸಾಲಿನ 5ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿ. 03.09.2022ರಂದು ಮಧ್ಯಾಹ್ನ 3.00 ಗಂಟೆಗೆ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಇಲ್ಲಿ ನಡೆಸಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದರಿಂದ ಈ ಬಗ್ಗೆ ಸರ್ವ ಸದಸ್ಯರಿಗೂ ಸಭೆಯ ನೋಟೀಸನ್ನು ನಮ್ಮಲ್ಲಿರುವ ಸದಸ್ಯರ ವಿಳಾಸಗಳಿಗೆ ಅಂಚೆಯ ಮೂಲಕ ರವಾನಿಸಲಾಗಿದೆ. ಸರ್ವ ಸದಸ್ಯರು ಈ ಸಭೆಗೆ ಆಗಮಿಸಿ, ತಮ್ಮ ಸಲಹೆ, ಸೂಚನೆಗಳನ್ನು ನೀಡುವುದರ ಮೂಲಕ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಸೂಚನೆ : ಸಭೆಯ ನೋಟೀಸು ತಲುಪದೇ ಇರುವ ಸದಸ್ಯರು ಪ್ರಕಟಣೆಯನ್ನೇ ಸಭೆಯ ನೋಟೀಸೆಂದು ಪರಿಗಣಿಸಿ, ಸಭೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಲಾಗಿದೆ. ವಿಳಾಸದಲ್ಲಿ ಬದಲಾವಣೆ ಆಗಿದ್ದ ಪಕ್ಷದಲ್ಲಿ ದಾಖಲೆಯೊಂದಿಗೆ ಸಹಕಾರಿಯ ಕಛೇರಿಯಲ್ಲಿ ವಿಳಾಸವನ್ನು ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.

ಸ್ಥಳ : ದಾವಣಗೆರೆ
ದಿನಾಂಕ : 17.08.2022

ಸಹಿ/- ಸಂಘವಿ ಮಹಾವೀರ್ ಜೈನ್, ಅಧ್ಯಕ್ಷರು
ಸಹಿ/- ಎ. ಪ್ರಕಾಶ್, ಉಪಾಧ್ಯಕ್ಷರು
ಸಹಿ/- ರಾಜೇಂದ್ರ ಪ್ರಸಾದ್ ಆರ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ


## ತ್ರಿಸದಸ್ಯ ಸಮಿತಿಗೆ ಹೈಕೋರ್ಟ್ ತಡೆ

**(1ನೇ ಪುಟದಿಂದ)** ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ 1995ರಲ್ಲಿ, ಸಮುದಾಯವೊಂದನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಸಮಿತಿ ರಚಿಸಲು ಯಾವುದೇ ಅವಕಾಶ ಇಲ್ಲ ಎಂದು ಅರ್ಜಿದಾರರು ಹೇಳಿದ್ದಾರೆ.

ಅರ್ಜಿಯನ್ನು ಏಕಸದಸ್ಯ ಪೀಠ ಮೊದಲು ವಿಚಾರಣೆ ನಡೆಸಿತ್ತು. ನಂತರ ವಿಚಾರಣೆಯನ್ನು ವಿಭಾಗೀಯ ಪೀಠಕ್ಕೆ ವಹಿಸಲಾಗಿತ್ತು. ವಿಭಾಗೀಯ ಪೀಠವು ತಡೆಯಾಜ್ಞೆ ಹೊರಡಿಸಿದ್ದು, ಮುಂದಿನ ವಿಚಾರಣೆಯನ್ನು ಆಗಸ್ಟ್ 24ಕ್ಕೆ ನಿಗದಿ ಪಡಿಸಿದೆ.

## ಮಥುರ : ನೂಕು ನುಗ್ಗಲು ; ಸಾವು

ಮಥುರ, ಆ. 20 – ಇಲ್ಲಿನ ಪ್ರಸಿದ್ಧ ಬಂಕೇ ಬಿಹಾರಿ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು ನೂಕು ನುಗ್ಗಲು ಉಂಟಾಗಿ ಇಬ್ಬರು ಸಾವನ್ನಪ್ಪಿದ್ದಾರೆ. ಶನಿವಾರ ಬೆಳಗಿನ ಜಾವ ಮಂಗಳಾರತಿಯ ವೇಳೆ ನೂಕು ನುಗ್ಗಲಿನ ವಾತಾವರಣ ಉಂಟಾಗಿ ಇಬ್ಬರು ಉಸಿರು ಕಟ್ಟಿ ಸಾವನ್ನಪ್ಪಿದ್ದಾರೆ.

ಮೃತರನ್ನು ನೋಯ್ಡಾದ 55 ವರ್ಷದ ಮಹಿಳೆ ಹಾಗೂ ಜಬಲ್ಪುರದ 65 ವರ್ಷದ ಮಹಿಳೆ ಎಂದು ಗುರುತಿಸಲಾಗಿದೆ. ಬೆಳಗಿನ ಜಾವ 1.45ರ ಸಮಯದಲ್ಲಿ ಮಂಗಳಾರತಿ ನೆರವೇರಿಸಲಾಗುತ್ತಿತ್ತು. ಆಗ ನೂಕು ನುಗ್ಗಲು ಉಂಟಾಗಿದೆ. ಆಗ ಸಿಬ್ಬಂದಿ ಸಮಯೋಚಿತವಾಗಿ ಮಧ್ಯ ಪ್ರವೇಶಿಸಿ ಹಲವಾರು ಜನರನ್ನು ರಕ್ಷಿಸಿದ್ದಾರೆ ಎಂದು ದೇವಾಲಯದ ಪೂಜಾರಿ ಶಶಾಂಕ್ ಗೋಸ್ವಾಮಿ ತಿಳಿಸಿದ್ದಾರೆ.

# ವಾರ ಭವಿಷ್ಯ

**ದಿನಾಂಕ : 21.08.2022 ರಿಂದ 27.08.2022**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ತಿಳಿದೋ ತಿಳಿಯದೋ ಅಥವಾ ನಯವಂಚಕರ ಜಾಲಕ್ಕೆ ಸಿಕ್ಕು ಮೋಸಹೋಗುವ ಸಂಭವವಿದೆ. ಇದರಿಂದಾಗಿ ದೊಡ್ಡ ಮೊತ್ತವನ್ನು ಕಳೆದುಕೊಳ್ಳ ಬೇಕಾದೀತು. ದಯವಿಟ್ಟು ವಿಷಯದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಮೇಲು. ಊಟೋಪಚಾರದಲ್ಲಿ ಮೈಮರೆಯಬೇಡಿ. ಮಗನ ಸಂಪಾದನೆ ದುರುಪಯೋಗವಾಗದಂತೆ ಜಾಗ್ರತೆ ವಹಿಸಿರಿ, ರೈತಾಪಿ ಜನರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬರಲಿದೆ. ಹಣಕಾಸಿನ ಹರಿವು ಸಾಧಾರಣವಾಗಿದೆ. ಕೋರ್ಟ್ ಕಛೇರಿಯೆಂದು ವೃಥಾ ಅಲೆದಾಟವಾಗಲಿದೆ. ಹಿರಿಯರನ್ನು ಗೌರವಿಸಿರಿ. ಇದರಲ್ಲೇ ನಿಮಗೆ ಕ್ಷೇಮ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಪೂರ್ವಸಿದ್ಧತೆಯಿಲ್ಲದ ಯೋಜನೆಗಳು ತಾತ್ಕಾಲಿವಾಗಿ ಸ್ಥಗಿತಗೊಳ್ಳಲಿವೆ, ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ಕಾಲಮಿಂಚದೇ ಇರುವುದರಿಂದ ಈಗಲಾದರೂ, ಸಕಲ ಸಿದ್ಧತೆ ಮಾಡಿಕೊಳ್ಳಿ. ರಿಯಲ್ ಎಸ್ಟೇಟ್ ವ್ಯವಹಾರ ಸುಗಮವಾಗಿ ಸಾಗಲಿದೆ. ಆದಾಯದ ಮೂಲದಲ್ಲಿ ಸಾಕಷ್ಟು ಹೆಚ್ಚಳ ಕಂಡುಬರಲಿದ್ದು, ಆದ್ಯತೆಯ ಮೇರೆಗೆ ನಿಮ್ಮ ಸಾಲಸೋಲಗಳನ್ನು ಬಗೆಹರಿಸಿಕೊಳ್ಳಲು ಇದೊಂದು ಸದವಕಾಶವೆಂದು ತಿಳಿಯಿರಿ. ಹೈನುಗಾರಿಕೆ ಹೆಚ್ಚಿನ ಲಾಭ ತರಲಾರದು. ಹೂವು-ಹಣ್ಣು-ತರಕಾರಿ ಮಾರಾಟಗಾರರಿಗೆ, ಸಾಕಷ್ಟು ಲಾಭಾಂಶವನ್ನು ನಿರೀಕ್ಷಿಸಬಹುದು. ಮಹಾಲಕ್ಷ್ಮಿಯನ್ನು ಆರಾಧಿಸಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಹಣದ ಹರಿವು ನಿಮ್ಮ ನಿರೀಕ್ಷೆಗೂ ಮೀರಿ ಇರುವುದರಿಂದ, ಉಳಿತಾಯದ ಬಗ್ಗೆ ಯೋಚಿಸಲು ಇದು ಸಕಾಲವಾಗಿದೆ. ದೊಡ್ಡವರೊಂದಿಗೆ ತಿಳಿಯದ ವಿಷಯದ ಬಗ್ಗೆ ಮೇಧಾವಿಯಂತೆ ವರ್ತಿಸುವುದರಿಂದ, ನಿಮ್ಮ ಮೂರ್ಖತನದ ಪ್ರದರ್ಶನವಾಗಲಿದೆ. ಮೊಂಡ ವಾದವಂತೂ ನಿಮಗೇ ತಿರುಗುಬಾಣವಾಗಬಹುದು. ಮಕ್ಕಳ ಉನ್ನತಾಧ್ಯಯನಕ್ಕೆ, ಬಂಧುಗಳಿಂದ ಸಾಕಷ್ಟು ಆರ್ಥಿಕ ನೆರವು ಸಿಗಲಿದೆ. ಸದ್ಯದ ಪರಿಸ್ಥಿತಿಯಲ್ಲಿ ರಾಜಕಾರಣಿಗಳನ್ನು ನಂಬಬೇಡಿ. ಸಮಾಜಸೇವೆಯಲ್ಲಿ ತೊಡಗಿ ಕೊಂಡವರಿಗೆ ಸಾರ್ವಜನಿಕರಿಂದಲೇ ಕಿರಿಕಿರಿಯುಂಟಾಗಲಿದೆ. ಆತ್ಮವಿಶ್ವಾಸದೊಂದಿಗೆ ಮುನ್ನಡೆಯಿರಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಕರ್ತವ್ಯದ ನಿಮಿತ್ತವಾಗಿ ಬಹಳ ಕಾಲದಿಂದ ಕುಟುಂಬದ ಸದಸ್ಯರಿಂದ ದೂರವಿದ್ದವರು ಮತ್ತೆ ಮರಳಿ ಮೂಲ ಸ್ಥಾನಕ್ಕೆ ಮರಳಲಿದ್ದಾರೆ. ಹಣಕಾಸಿನ ವಿಚಾರದಲ್ಲಿ ಬಂಧುಗಳಿಂದಲೇ ಮೋಸಹೋಗುವ ಪ್ರಸಂಗ ಬರಲಿದೆ. ಪ್ರತಿಯೊಂದರಲ್ಲೂ ವ್ಯಾವಹಾರಿಕ ನಡವಳಿಕೆ ಭವಿಷ್ಯದ ದೃಷ್ಟಿಯಿಂದ ಅಷ್ಟು ಸರಿಯಲ್ಲ. ನಿರುದ್ಯೋಗಿಗಳಿಗೆ ಸಿಗಲಿರುವ ನೌಕರಿಯಿಂದಾಗಿ, ಅವರ ಜೀವನ ಶೈಲಿಯೇ ಬದಲಾಗಲಿದೆ. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಸರ್ಕಾರದಿಂದ ನೆರವು ದೊರಯಲಿದೆ. ರೈತಾಪಿ ಜನರಿಗೆ ಕೃಷಿ ಕಾರ್ಮಿಕರ ಸಮಸ್ಯೆ ಎದುರಾಗಲಿದೆ. ಸೋಮ-ಗುರು-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮಾಡುತ್ತಿರುವ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆಯಿಂದಿರುವುದು ಮೇಲು. ಗ್ರಾಹಕರೊಂದಿಗೆ ಸೌಹಾರ್ದತೆಯಿಂದ ವರ್ತಿಸುವಂತೆ ಕೆಲಸಗಾರರಿಗೆ ಎಚ್ಚರಿಸುವುದು ಉತ್ತಮ. ಕೌಟುಂಬಿಕ ಜವಾಬ್ದಾರಿಗಳು ಮಹಿಳೆಯರಿಗೆ ಹೆಚ್ಚಲಿವೆ. ಹಿರಿಯರ ಸಲಹೆಗಳನ್ನು ಕೊನೆ ಪಕ್ಷ ಕೇಳಿಸಿಕೊಳ್ಳುವಷ್ಟಾದರೂ ತಾಳ್ಮೆಯಿರಲಿ. ಆದರೆ ನೀವು ಮಾಡಲಿರುವ ಸಹಾಯ ಇತಿಮಿತಿಯಲ್ಲಿದ್ದರೆ ಉತ್ತಮ. ರೈತಾಪಿ ಜನರಿಗೆ, ಜಮೀನಿಗೆ ಸಂಬಂಧಿಸಿದಂತೆ, ನೆರೆಯವರೊಂದಿಗೆ ವ್ಯಾಜ್ಯವುಂಟಾಗಲಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಅವಕಾಶ ದೊರೆಯಲಿದೆ. ಕುಲದೇವತಾ ದರ್ಶನ ಭಾಗ್ಯವನ್ನು ಕೈಚೆಲ್ಲಬೇಡಿ. ಭಾನು-ಸೋಮ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನಿಮಗೇ ತಿಳಿಯದಂತೆ ಅನೇಕ ಸಮಸ್ಯೆಗಳು ಮನೆಯಲ್ಲಿ ಘಟಿಸಲಿದ್ದು, ಅದು ನಿಮ್ಮನ್ನು ವಿಚಲಿತರನ್ನಾಗಿಸಲಿದೆ. ಸಾಧ್ಯವಾದಷ್ಟು ಬೇಗನೆ ಅದನ್ನು ಬಗೆಹರಿಸಲು ಪ್ರಯತ್ನಿಸಿ. ಆದರೆ ದುಡುಕಿನ ನಿರ್ಧಾರಗಳನ್ನು ಖಂಡಿತಾ ತೆಗೆದುಕೊಳ್ಳ ಬೇಡಿ. ಸಂಗೀತಗಾರರ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ ದೊರೆಯಲಿದೆ. ಮಹಿಳೆಯರಿಗೆ ಸಂಪಾದನೆ ಹೆಚ್ಚಿಸಿಕೊಳ್ಳಲು ಹಲವು ಮಾರ್ಗೋಪಾಯಗಳು ಕಾಣಲಿವೆ.ವಿ ದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕೆ ಹೆಚ್ಚಿನ ಶ್ರಮಪಡದೆ ವಿಧಿಯಿಲ್ಲ. ಆದಾಯದ ಮೂಲದಲ್ಲಿ ಅನಿರೀಕ್ಷಿತವಾಗಿ ಸಾಕಷ್ಟು ಕಡಿತವುಂಟಾಗಲಿರುವುದರಿಂದ, ಖರ್ಚುವೆಚ್ಚಗಳ ಮೇಲೆ ಕಡಿವಾಣಹಾಕುವುದು ಮೇಲು. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪರಿವಾರದೊಂದಿಗೆ ಪ್ರವಾಸ ಹೋಗಲಿದ್ದೀರಿ. ಈ ಸಮಯದಲ್ಲಿ ಸಾಕಷ್ಟು ಪೂರ್ವ ಸಿದ್ಧತೆಯೊಂದಿಗೆ ಮತ್ತು ಸಾಧ್ಯವಾದಷ್ಟು ಮುನ್ನೆಚ್ಚರಿಕೆಯೊಂದಿಗೆ ಹೊರಡಿ. ಹಿಂದುಮುಂದು ಆಲೋಚನೆಯಿಲ್ಲದೇ ಮನೆ ಕಟ್ಟುತ್ತಿರುವವರಿಗೆ ಅಥವಾ ಆಸ್ತಿ ಕೊಳ್ಳುವವರಿಗೆ ಹಣಕಾಸಿನ ನೆರವು ನೀಡುವುದಾಗಿ ಭರವಸೆ ಕೊಟ್ಟವರು ಅನಿರೀಕ್ಷಿತವಾಗಿ ಕೈಕೊಡಬಹುದು. ನಿರುದ್ಯೋಗಿ ಪದವೀಧರರಿಗೆ ತಾತ್ಕಾಲಿಕ ನೌಕರಿ ಸಿಗಲಿದೆ. ಉನ್ನತಾಧ್ಯಯನಮಾಡಬಯಸುವವರಿಗೆ ಸಮಾಜದಿಂದ ಹೆಚ್ಚಿನ ನೆರವು ದೊರೆಯಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಈ ಹಿಂದೆ ಬಹುಶ್ರಮಪಟ್ಟು, ಇಷ್ಟಪಟ್ಟು ಆರಂಭಿಸಿದ ಹೊಸ ಯೋಜನೆಗಳು ಇನ್ನುಮುಂದೆ ಲಾಭ ತರಲಿವೆ. ಮನೆಯಲ್ಲಿ ಮಡದಿಯ ಆರೋಗ್ಯದಲ್ಲಿ ವ್ಯತ್ಯಾಸವಾಗಲಿರುವುದರಿಂದ ಸಾಧ್ಯವಾದಷ್ಟು ಪ್ರಯಾಣವನ್ನು ಮುಂದೂಡುವುದು ಉತ್ತಮ. ರಾಜಕೀಯ ರಂಗದಲ್ಲಿರುವವರಿಗೆ ತಮ್ಮ ಹಿಂಬಾಲಕರಿಂದಾಗಿ ಪಕ್ಷದ ವರಿಷ್ಠರ ಎದುರಿನಲ್ಲಿ ತಲೆತಗ್ಗಿಸುವ ಪ್ರಸಂಗ ಬಂದೀತು. ನನ್ನವರೆಂದು ಕೊಂಡವರಿಂದಲೇ ಮೋಸ ಹೋಗುವ ಸಂಭವವಿದೆ. ಪತ್ರಿಕೋದ್ಯಮದಲ್ಲಿರುವವರು, ಗಣ್ಯಾತಿಗಣ್ಯ ವ್ಯಕ್ತಿಗಳೊಂದಿಗೆ ಸಂದರ್ಶನ ನಡೆಸಿ ಪ್ರಸಿದ್ಧಿಯಾಗುವರು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಢ.ಬೆ.)**

ಬಹಳ ಚುರುಕಿನಿಂದ ಕೆಲಸ ಮಾಡುವವರಿಗೆ, ಹಲವು ಅತ್ಯುತ್ತಮ ಅವಕಾಶಗಳು ತಾವಾಗಿಯೇ ಅರಸಿಕೊಂಡುಬರಲಿವೆ. ತುಸು ಅದೃಷ್ಟದ ಬೆಂಬಲ ವಿದ್ದಲ್ಲಿ ಕಂಪನಿಯೊಂದರ ನಿರ್ವಾಹಕರೂ ಆಗಬಹುದು. ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಒತ್ತಡದ ವಾತಾವರಣ. ತುಸು ತಡವಾದರೂ ಚಿಂತೆಯಿಲ್ಲ, ಮಾಡುವ ಕೆಲಸ ಅಚ್ಚುಕಟ್ಟಾಗಿರಲಿ. ಭೂ ಸಂಬಂಧಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಾಗಲಿದೆ. ಪ್ರಕೃತಿ ಪ್ರಿಯರಿಗೆ ಮತ್ತು ಪರಿಸರವಾದಿಗಳಿಗೆ ಸರ್ಕಾರದಿಂದ ಸನ್ಮಾನವಾಗಲಿದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯಲು ಹೆಚ್ಚಿನ ಪರಿಶ್ರಮ ಪಡಬೇಕಾದೀತು, ಆರ್ಥಿಕ ಸ್ಥಿತಿಗತಿ ಸಾಧಾರಣ, ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕೆಲವೊಮ್ಮೆ ಆದರ್ಶಗಳನ್ನು ಬದಿಗಿಟ್ಟು, ಪ್ರಭಾವೀ ವ್ಯಕ್ತಿಗಳ ಮೊರೆ ಹೋಗದ ಹೊರತು ಕೆಲಸಗಳು ಆಗುವುದೇ ಇಲ್ಲ ಎಂಬುದನ್ನು ನೆನಪಿಡಿ. ಷೇರು ಮಾರುಕಟ್ಟೆಯಲ್ಲಿ ಅನಿರೀಕ್ಷಿತ ಏರಿಳಿತಗಳು, ನಿಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಅಡ್ಡ ಪರಿಣಾಮ ಬೀರಲಿದೆ. ವೇತನದ ಕಡೆ ಗಮನಕೊಡದೆ ಸಿಕ್ಕ ನೌಕರಿಯನ್ನು ಕೈಚೆಲ್ಲದೆ ಒಪ್ಪಿಕೊಳ್ಳುವುದರಲ್ಲಿ ನಿಮ್ಮ ಜಾಣತನವಡಗಿದೆ. ಹಾಲಿನ ಉತ್ಪನ್ನಗಳ ತಯಾರಕರಿಗೆ ವಹಿವಾಟು ಹೆಚ್ಚುವುದರೊಂದಿಗೆ ಲಾಭಾಧಿಕ್ಯವಾಗಲಿದೆ. ಆಶ್ಚರ್ಯ ವೆಂಬುವಂತೆ ಹಿರಿಯ ಸನ್ಯಾಸಿಗಳೊಬ್ಬರ ದರ್ಶನವಾಗಲಿದೆ, ಇದು ನಿಮ್ಮ ಭಾಗ್ಯವೇ ಸರಿ. ಅನಿರೀಕ್ಷಿತ ಖರ್ಚು ಅನಿವಾರ್ಯವಾಗಲಿದೆ. ಮಂಗಳ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಲವು ನಿರ್ಧಾರಗಳನ್ನು ಮತ್ತೆ ಆಲೋಚಿಸಿ ತೆಗೆದುಕೊಳ್ಳುವುದು ಮೇಲು. ಸರ್ಕಾರದಲ್ಲಿ ಪ್ರಮುಖ ಇಲಾಖೆಗಳಲ್ಲಿರುವ ಹಿರಿಯ ಅಧಿಕಾರಿಗಳಿಗೆ, ಕಾಣದ ವ್ಯಕ್ತಿಗಳ ಪ್ರಭಾವದಿಂದಾಗಿ, ಅನಪೇಕ್ಷಿತ ಸ್ಥಳಗಳಿಗೆ ವರ್ಗಾವಣೆ, ಹೊಸ ಮನೆಕಟ್ಟುವ ವಿಚಾರದಲ್ಲಿ ಹಿರಿಯರೊಂದಿಗೆ ಕಾವೇರಿದ ಚರ್ಚೆಯಾಗಲಿದೆ. ಒಡಹುಟ್ಟಿದವರು ಸಹಾಯಮಾಡುವರೆಂಬ ಭ್ರಮೆಯನ್ನು ಬಿಡಿ. ಕೆಲವು ವ್ಯಾಪಾರಸ್ಥರಿಗೆ ಅಧಿಕ ಲಾಭವಾಗಲಿದೆ. ಸ್ನೇಹಿತರ ಮನೆಯಲ್ಲಿ ನಡೆಯಲಿರುವ ಶುಭ ಕಾರ್ಯಗಳಲ್ಲಿ ಪರಿವಾರ ಸಮೇತ ಭಾಗವಹಿಸುವಿರಿ.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕೌಟುಂಬಿಕ ಸಮಸ್ಯೆಗಳು ಅತಿಥಿಗಳೊಬ್ಬರಿಂದ ಬಗೆಹರಿಯಲಿವೆ. ಅಪರಿಚಿತ ಸ್ತ್ರೀಯರ ವೈಯಕ್ತಿಕ ವಿಚಾರದಲ್ಲಿ ವಿನಾಕಾರಣ ಆಸಕ್ತಿ ತೋರಬೇಡಿ. ಇದನ್ನೇ ಕಾಯುತ್ತಿದ್ದ ಶತ್ರುಗಳು ನಿಮ್ಮ ಚಾರಿತ್ರ್ಯವಧೆಗೆ ಯತ್ನಿಸಬಹುದು. ಸ್ವಯಂ ಉದ್ಯೋಗದಲ್ಲಿ ಹೆಚ್ಚಿನ ಪರಿಶ್ರಮದಿಂದ ಮಾತ್ರ ಲಾಭ. ಸಮಾಜದ ಧುರೀಣರಿಗೆ ಅಪಮಾನವಾಗುವ ಸನ್ನಿವೇಶವೊಂದು ಎದುರಾಗಲಿದೆ. ಯಾವುದೇ ಕಾರಣಕ್ಕೂ, ನೆರೆಹೊರೆಯರೊಂದಿಗೆ ನಿಷ್ಠೂರ ಕಟ್ಟಿಕೊಳ್ಳಬೇಡಿ. ಆರ್ಥಿಕ ಪರಿಸ್ಥಿತಿ ಸಾಧಾರಣ, ಖರ್ಚುಗಳ ಮೇಲೆ ಕಡಿವಾಣ ಹಾಕಿರಿ. ಬುಧ-ಗುರು-ಶನಿ-ಶುಭ ದಿನಗಳು

**ವಿಶೇಷ ದಿನಗಳು : ದಿನಾಂಕ: 27-8-2022 ಶನಿವಾರ ಬೆನಕನ ಅಮಾವಾಸ್ಯೆ.**

# ಅದಮ್ಯ ಚೇತನ ಎಂ.ಎಸ್. ಶಿವಣ್ಣ...



**ಶಿವಣ್ಣ ಶಾಲೆ ಮಾತ್ರ ಮಾಡಲಿಲ್ಲ, ಹಸು ಕಟ್ಟಿ ಹಾಲು ಮಾರಿದರು. ಪ್ರಿಂಟಿಂಗ್ ಪ್ರೆಸ್ ಹಾಕಿ ದೈನಿಕ - ಸಾಪ್ತಾಹಿಕಗಳನ್ನು ಹೊರತಂದರು. ಸ್ವತಃ ಬಣ್ಣ ಬಳಿದು ನಾಟಕವಾಡಿದರು. ತಂಡ ಕಟ್ಟಿ ನಾಟಕ ಆಡಲು ಪ್ರೋತ್ಸಾಹಿಸಿದರು. ಸಮಾಜದಲ್ಲಿನ ಅಮಾಯಕರ ಮೇಲೆ ನಡೆವ ದೌರ್ಜನ್ಯದ ವಿರುದ್ಧ ಬೀದಿಗಿಳಿದದ್ದು ಮಾತ್ರವಲ್ಲ, ಕಾನೂನು ಸಮರವನ್ನೂ ಆರಂಭಿಸಿದರು.**

ಅದಮ್ಯವಾದ ಇಚ್ಛಾಶಕ್ತಿ, ಏನೆಲ್ಲಾ ಪ್ರತಿರೋಧಗಳ ನಡುವೆಯೂ ಹಿಡಿದ ಗುರಿ ಬಿಡದೆ ಸಾಧಿಸುವ ಛಲ, ಕಷ್ಟ - ಕೋಟಲೆಗಳ ನಡುವೆಯೂ ಋಣಭಾರ ತೀರು ವಳಿಗೋ ಎಂಬಂತೆ ಸಮಾಜವೆಂದೂ ಮರೆ ಯದ ಕೊಡುಗೆ ನೀಡಿ, ಕರ್ತವ್ಯ ಮುಗಿದೊಡನೆ ಸಂತನಂತೆ ಸರಸರನೆ ನಡೆವ ಪರಿ....

ಬಹುಶಃ ಶಿವಣ್ಣನವರ ಬಗ್ಗೆ ಮೂರೇ ಮಾತಲ್ಲಿ ಹೇಳಬೇಕೆಂದರೆ ಇದು ಸಾಕಾದೀತೇನೋ ! "ಸಿದ್ದಗಂಗಾ ಶಿವಣ್ಣ" ಎಂದೇ ದಾವಣಗೆರೆ ಹಾಗೂ ಸುತ್ತಲಿನ ಜನಮಾನಸದಲ್ಲಿ ಭದ್ರ ಸ್ಥಾನ ಸಂಪಾದಿಸಿರುವ "ಶಿಕ್ಷಣ ಶಿಲ್ಪಿ" ಎಂ.ಎಸ್.ಶಿವಣ್ಣನವರ ಎರಡನೇ ವರ್ಷದ ಪುಣ್ಯಸ್ಮರಣೆ ಹಾಗೂ ಶಿಲಾಮಂಟಪ ಇದೇ ಭಾನುವಾರ (21-8-2022) ಅರ್ಪಣೆಯಾಗ ಲಿದ್ದು, ಶಿವಣ್ಣನವರ ಕೈಲಿ ಕಳೆದ ಅರೆ ಶತ ಮಾನದ ಅವಧಿಯಲ್ಲಿ ಕಲಿತ ಹಿರಿಯ ವಿದ್ಯಾರ್ಥಿಗಳೇ ವ್ಯವಸ್ಥೆಯ ಮುಂದಾಳತ್ವ ವಹಿಸಿರು ವುದೇ ಶಿವಣ್ಣನವರ ಜನಪ್ರಿಯತೆಯ ದ್ಯೋತಕ!

ಎಂ.ಎಸ್.ಎಸ್.ರನ್ನು ಕಳೆದ ಸರಿ ಸುಮಾರು ಐದು ದಶಕದಷ್ಟು ಕಾಲದಿಂದ ಅವರ ಎಲ್ಲ ಹೋರಾಟಗಳನ್ನೂ ಒಬ್ಬ ಪತ್ರಕರ್ತ ನಾಗಿ, ಅಭಿಮಾನಿಯಾಗಿ ಗಮನಿಸುತ್ತಾ ಬಂದ ನನಗೆ ಕಂಡದ್ದು ಅವರ ಅಸೀಮವೆನಿಸಿದ ಧೀರೋದಾತ್ತ ನಡೆ! ಎಂತಹ ಪ್ರಚಂಡ ದೈತ್ಯ ಶಕ್ತಿಯೇ ಎದುರಾದರೂ ಕಿಂಚಿತ್ತೂ ಅಂಜದೆ - ಅಳುಕದೆ ಮುನ್ನಡಿಯಿಡುವ, ನಂಬಿದ ತತ್ವಗಳಿಗಾಗಿ ಪ್ರಾಣಾರ್ಪಣೆಗೂ ಸಿದ್ದರಾಗಿ, ತಾರ್ಕಿಕ ಅಂತ್ಯಕ್ಕೊಯ್ಯುವ ಛಲವಂತಿಕೆಗೆ ಶಿವಣ್ಣನವರಿಗೆ ಶಿವಣ್ಣನವರೇ ಸಾಟಿ !

ತಲೆತುಂಬಾ ನೂರೆಂಟು ಕನಸುಗಳು, ಸಿದ್ದಗಂಗೆಯ 'ನಡೆದಾಡುವ ದೇವರ' ಕೃಪಾ ಶೀರ್ವಾದ ಮಾತ್ರದೊಂದಿಗೆ ಹಸಿದ ಹೊಟ್ಟೆಯ ತುಂಬಿಸಿಕೊಳ್ಳುವುದರೊಂದಿಗೆ 'ಏನನ್ನಾದರೂ' ಸಾಧಿಸಿಯೇ ತೋರಿಸುವ ಅಚಲ ನಿಷ್ಠೆಯೊಂದಿಗೆ ಅರೆ ಶತಮಾನದ ಹಿಂದೆ ದಾವಣಗೆರೆಗೆ ಬಂದ ಶಿವಣ್ಣ 'ಕೈಲೊಂದು ಸೀಮೆಸುಣ್ಣ - ಎದುರಿಗೆ ಕಪ್ಪು ಹಲಗೆ' ಜೊತೆಯಲ್ಲಿ ಅದ್ಭುತವಾದ ವಿದ್ಯಾಕ್ರಾಂತಿಯನ್ನೇ ಮಾಡಿದರು. ಕಿಂಡರ್ ಗಾರ್ಟನ್ ನಿಂದ ಪಿ.ಯು.ವರೆಗೆ (ಸದ್ಯಕ್ಕೆ) ಮಧ್ಯಕರ್ನಾಟಕ ದಲ್ಲಿಯೇ ಮತ್ತೊಂದು ವಿದ್ಯಾ ಸಂಸ್ಥೆ ಇಲ್ಲವೆಂಬುದಷ್ಟರ ಮಟ್ಟಿಗೆ ಸಿದ್ದಗಂಗಾ ವಿದ್ಯಾಸಂಸ್ಥೆಯನ್ನು ರೂಪಿಸಿದ್ದೀಗ ಇತಿಹಾಸ.

ಶಿವಣ್ಣ ಶಾಲೆ ಮಾತ್ರ ಮಾಡಲಿಲ್ಲ, ಹಸು ಕಟ್ಟಿ ಹಾಲು ಮಾರಿದರು. ಪ್ರಿಂಟಿಂಗ್ ಪ್ರೆಸ್ ಹಾಕಿ ದೈನಿಕ - ಸಾಪ್ತಾಹಿಕಗಳನ್ನು ಹೊರ ತಂದರು. ಸ್ವತಃ ಬಣ್ಣ ಬಳಿದು ನಾಟಕವಾಡಿದರು. ತಂಡ ಕಟ್ಟಿ ನಾಟಕ ಆಡಲು ಪ್ರೋತ್ಸಾಹಿಸಿದರು. ಸಮಾಜದಲ್ಲಿನ ಅಮಾಯಕರ ಮೇಲೆ ನಡೆವ ದೌರ್ಜನ್ಯದ ವಿರುದ್ಧ ಬೀದಿಗಿಳಿದದ್ದು ಮಾತ್ರ ವಲ್ಲ, ಕಾನೂನು ಸಮರವನ್ನೂ ಆರಂಭಿಸಿದರು. ಪ್ರೇಮಿಗಳಿಗೆ ಮನೆಯಲ್ಲಿಯೇ ಆಶ್ರಯವಿತ್ತು ಸಪ್ತಪದಿ ತುಳಿಸಿದರು. ಹಣ ಹೊಂದಿಸಲಾಗದ ಬಡವರ ಮನೆಯ ಮದುವೆಗೆ, ತಮ್ಮ ಮನೆಯಲ್ಲಿದ್ದ ಚೂರು - ಪಾರು ಚಿನ್ನ ಅಡವಿರಿಸಿ ಧನ ಸಹಾಯ ಮಾಡಿದರು !

ಭಾಷಾ ಚಳುವಳಿಯ ಯಶಸ್ಸಿನಲ್ಲಿ ಎಮ್.ಎಸ್.ಎಸ್.ರ ಪಾತ್ರವಂತೂ ಅಪರೂಪದ್ದು. ಯಾವುದೇ ಕನ್ನಡ ಪರ ಹೋರಾಟಗಾರರನ್ನು ಪೊಲೀಸರು ಬಂಧಿಸಿ ಕೋರ್ಟ್‌ಗೆ ಕರೆತಂದರೆ, ಕೈಲಿ ಮನೆ ಪತ್ರ - ಜೇಬಲ್ಲಿ ದುಡ್ಡಿನೊಂದಿಗೆ ಶಿವಣ್ಣನವರ ಹಾಜರಾತಿ ಇರುತ್ತಿತ್ತು ಎಂದು ಆ ಕಾಲದ ನನ್ನ ಚಳುವಳಿ ಮಿತ್ರರು ಈಗಲೂ ನೆನಪಿಸಿಕೊಳ್ಳುತ್ತಾರೆ. (ಮನೆ ಪತ್ರ ಹೋರಾಟಗಾರರಿಗೆ ಜಾಮೀನಿಗೆ ಆಧಾರವಾಗಿರಿಸಲು ಹಾಗೂ ದುಡ್ಡು ಹೊರ ಬಂದವರ ಹಸಿವು ತೀರಿಸಲು!)

ಹೀಗೆ ಬೋಧನೆ, ಹೋರಾಟ, ಸಾಧನೆಗಳ ನಡುವೆ ಅಪ್ಪಟ ಮಾನವೀಯ ಅಂತಃಕರಣದ ಅಪರೂಪದ ವ್ಯಕ್ತಿತ್ವದ ಶಿವಣ್ಣನವರು ಸದಾಕಾಲ ಜನ ಜಂಗುಳಿಯ ನಡುವೆಯಿದ್ದೂ, ಸಂತನಂತೆ ಬದುಕಿ, ಕರ್ತವ್ಯ ಮುಗಿದೊಡನೆ ಸರ ಸರನೆ ಸರಿದು ಹೋಗಿ ವರ್ಷ ಎರಡಾಯಿತು. ಸದಾ ಕಾಲವೂ ಸ್ಮರಣೀಯರಾಗಿರುವ ಶಿವಣ್ಣನವರು ಹಾಕಿ ಕೊಟ್ಟ ಹಾದಿಯಲ್ಲಿಯೇ ವಿನೀತರಾಗಿ ಮುನ್ನಡಿಯಿಡುತ್ತಿರುವ ಪತ್ನಿ ಶ್ರೀಮತಿ ಜಸ್ಟಿನ್ ಡಿಸೋಜ ಹಾಗೂ ಮಕ್ಕಳು ಇಂದಿಗೂ ಅದೇ ಪರಂಪರೆಯನ್ನು ಮುಂದುವರೆಸುತ್ತಾ, ಸಮಾಜ ಸೇವೆಯಲ್ಲಿ ತೊಡಗಿರುವುದು ಗಮನಾರ್ಹ.

ದಾವಣಗೆರೆಯ ಬಳಿ ಆನಗೋಡು ಸಮೀಪ 'ಸಿದ್ದಗಂಗೋತ್ರಿ'ಯಲ್ಲಿ ಶಿವಣ್ಣನವರ ಸಮಾಧಿ ಸ್ಥಳದಲ್ಲಿ ಹಿರಿಯ ವಿದ್ಯಾರ್ಥಿಗಳು ಶಿಲಾ ಮಂಟಪ ಲೋಕಾರ್ಪಣೆ ಮಾಡಲಿದ್ದು, ಇದೇ 21ರ ಭಾನುವಾರ ಬೆಳಗ್ಗೆ 11 ಘಂಟೆಗೆ ವಿವಿಧ ಸ್ವಾಮೀಜಿಗಳ ಹಾಗೂ ಗಣ್ಯರ ಸಮ್ಮುಖ ದಲ್ಲಿ ಸ್ಮರಣೋತ್ಸವ ನಡೆಯಲಿದೆ. ಅಂದು ಬೆಳಗಿನಿಂದ ಸಿದ್ದಗಂಗಾ ಶಾಲೆಯಿಂದ, 'ಸಿದ್ದಗಂಗೋತ್ರಿ'ಗೆ ವಾಹನ ವ್ಯವಸ್ಥೆ ಮಾಡಲಾಗಿದೆ.

ಅಭಿಮಾನಿಗಳು, ಹಿರಿಯ ವಿದ್ಯಾರ್ಥಿಗಳು ದಯವಿಟ್ಟು ಬಂದು, ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಶಿವಣ್ಣನವರಿಗೆ ಬಹು ಪ್ರಿಯ ವಾಗಿದ್ದ ಪ್ರಸಾದ ಸ್ವೀಕರಿಸಿ ಎಂದು ಕೋರುತ್ತಾರೆ, ಜಸ್ಟಿನ್ ಡಿಸೋಜ ಮತ್ತು ಕುಟುಂಬ ವರ್ಗ.


ಶಿವಣ್ಣನವರ ಅಭಿಮಾನಿಯಾಗಿ ನಾನು ಹೋಗುತ್ತಿದ್ದೇನೆ. ಮತ್ತೆ ನೀವು?



**- ಹಳೇಬೀಡು ರಾಮಪ್ರಸಾದ್,**
ಹಿರಿಯ ಪತ್ರಕರ್ತರು,
ದಾವಣಗೆರೆ.

## ಪದವಾಣಿ-32

ರಚನೆ : ಮಮತಾ ರಾಧಾಕೃಷ್ಣ
ದಾವಣಗೆರೆ.





**ಎಡದಿಂದ ಬಲಕ್ಕೆ :**

| | | |
|---|---|---|
| 1) | ಪಾರ್ವತಿಯ ಗಂಡನಾಗಿ ಶಿವ ತಿರುಗಿ ಬಂದಿದ್ದಾನೆ | 5 |
| 4) | ಕರು ಮೇಲೆ ಉಂಟಾದ ಅನುಕಂಪ | 4 |
| 5) | ಆನೆ ಮೋರೆಯ ಗಣೇಶ | 4 |
| 7) | ಯಮನ ಕೈಯಲ್ಲಿರುವ ಹಗ್ಗ | 2 |
| 8) | ಮೀನು ಹಿಡಿಯುವ ಕೊಕ್ಕೆ | 2 |
| 11) | ಪಕ್ಕದ ಗೃಹ | 4 |
| 12) | ಶಾಲೆಯಲ್ಲಿ ಎಲ್ಲರೂ ಧರಿಸುವ ಒಂದೇ ಬಗೆಯ ಉಡುಪು | 4 |
| 14) | ಈತ ಮದುವೆಯ ಗಂಡು | 5 |

**ಮೇಲಿನಿಂದ ಕೆಳಕ್ಕೆ :**

| | | |
|---|---|---|
| 1) | ನಾಲ್ಕಕ್ಷರದ ಸೂರ್ಯ | 4 |
| 2) | ಹೆಚ್ಚಳ ಹೀಗೆ ಆಗಿದೆ | 2 |
| 3) | ಗುಡ್ಡಗಾಡಿನಲ್ಲಿ ವಾಸಿಸುವ ಮಂದಿ | 4 |
| 4) | ಕಲೆಯನ್ನು ಆರಾಧಿಸುವುದು | 5 |
| 6) | ಗ್ರಹ, ನಕ್ಷತ್ರಗಳಿಗೆ ಸಂಬಂಧಿಸಿದ ವಿಜ್ಞಾನ | 5 |
| 9) | ಸೀತಾಪತಿಯ ಹೆಸರು | 4 |
| 10) | ಕೋಮಲಾಂಗಿ-ಪುಲ್ಲಿಂಗ ರೂಪ | 4 |
| 13) | ಏಳೂವರೆ ಗಳಿಗೆ | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 31ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಚರಕ 3) ಪರಾಕು 5) ಲವ 6) ಭಾವ 7) ಸಮೂಹಗಾನ 11) ಅಂಕಗಣಿತ 14) ರಾಹು 15) ಇಹ 16) ಕಾಳಿಂಗ 17) ರಸನ.

ಮೇಲಿನಿಂದ ಕೆಳಕ್ಕೆ : 1) ಚಕ್ರವರ್ತಿ 2) ಕಲಹಂಸ 3) ಪವಮಾನ 4) ಕುಡಿನೋಟ 8) ಮೂಷಿಕ 9) ಗಾರಣಿ 10) ಸೌಪರ್ಣಿಕಾ 11) ಅಂಗರಾಗ 12) ತರಹರ 13) ಪ್ರಯೋಜನ.

## ಐವರನ್ನು ಬಡಿದು ಕೊಂದಿದ್ದೇವೆ ಎಂದ ಬಿಜೆಪಿ ಮಾಜಿ ಶಾಸಕ

ಜೈಪುರ, ಆ. 20 – ಐವರು ವ್ಯಕ್ತಿಗಳನ್ನು ಬಡಿದು ಕೊಂದಿರುವುದಾಗಿ ರಾಜಸ್ಥಾನದ ಬಿಜೆಪಿಯ ಮಾಜಿ ಶಾಸಕ ಗ್ಯಾನ್ ದೇವ್ ಅಹುಜಾ ಹೇಳಿರುವ ವಿಡಿಯೋ ಅನ್ನು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಗೋವಿಂದ್ ಸಿಂಗ್ ಡೊಟರ್ಸ ಬಿಡುಗಡೆ ಮಾಡಿದ್ದಾರೆ.

45 ವರ್ಷದ ಚಿರಂಜಲಿಲಾಲ್ ಸೈನಿ ಎಂಬುವವರನ್ನು ಬಡಿದು ಹತ್ಯೆಗೈಯ್ಯಲಾಗಿತ್ತು. ಇದರ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ ಅಹುಜಾ ಈ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ. ಮೇವ್ ಮುಸ್ಲಿಮ್ ಸಮುದಾಯಕ್ಕೆ ಸೇರಿದವರು ಭಾನುವಾರ ಗೋವಿಂದಘರ್ ನಗರದಲ್ಲಿ ಸೈನಿ ಹತ್ಯೆಗೈದಿದ್ದಾರೆ ಎಂದು ಆರೋಪಿಸಲಾಗಿತ್ತು.

ಅಲ್ವಾರ್ (ದಕ್ಷಿಣ) ಬಿಜೆಪಿ ಮುಖ್ಯಸ್ಥ ಸಂಜಯ್ ಸಿಂಗ್ ಅವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಇದು ಪಕ್ಷದ ನಿಲುವಲ್ಲ. ಅಹುಜಾ ವೈಯಕ್ತಿಕ ಹೇಳಿಕೆ ನೀಡಿದ್ದಾರೆ ಎಂದಿದ್ದಾರೆ. ಗೋವು ಸಾಗಣೆ ಹಾಗೂ ಹತ್ಯೆಯಲ್ಲಿ ಭಾಗಿಯಾದ ಯಾರನ್ನೂ ಬಿಡುವುದಿಲ್ಲ ಎಂದು ಮಾಜಿ ಶಾಸಕ ಅಹುಜ ಹೇಳಿದ್ದಾರೆ.

## ಲೋಡಿಂಗ್ ಕೆಲಸವನ್ನು ಸ್ಥಳೀಯ ಹಮಾಲರಿಗೆ ನೀಡಲು ಒತ್ತಾಯ

ದಾವಣಗೆರೆ, ಆ. 20- ಜಿಲ್ಲೆಯ ಅನ್ನಭಾಗ್ಯ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯ ಕಾರ್ಮಿಕರಿಗೆ ನೀಡಿರುವ ಲೋಡಿಂಗ್ ಕೆಲಸವನ್ನು ಸ್ಥಳೀಯ ಕಾರ್ಮಿಕರಿಗೂ ನೀಡುವಂತೆ ಕರ್ನಾಟಕ ರಾಜ್ಯ ಉಗ್ರಾಣ ಹಮಾಲರ ಸಂಘ ಒತ್ತಾಯಿಸಿದೆ. ಕರ್ನಾಟಕ ಉಗ್ರಾಣ ನಿಗಮದ ದಾವಣಗೆರೆ ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಹಮಾಲರಿಗೆ ಅನ್ಯಾಯವಾಗಿದ್ದು, ದಾವಣಗೆರೆ ಕಾರ್ಮಿಕರಿಗೆ ದೊರಕಬೇಕಾದ ಕೆಲಸವನ್ನು ಶಿವಮೊಗ್ಗ ಜಿಲ್ಲೆಯ ಹಮಾಲಿಗೆ ನೀಡಿರುವುದು ಅತ್ಯಂತ ಖಂಡನೀಯ ಎಂದು ಸಂಘದ ಅಧ್ಯಕ್ಷ ಆರ್. ರಮೇಶ್ ಹಾಗೂ ಕಾರ್ಯದರ್ಶಿ ಕೆ. ಮಂಜಪ್ಪ ಹೇಳಿದ್ದಾರೆ.

ಕೋವಿಡ್‌ನಿಂದ ಈಚೆಗೆ ಯಾವ ರೀತಿಯಲ್ಲೂ ಕೆಲಸ ಸಿಕ್ಕಿರುವುದಿಲ್ಲ. ದಾವಣಗೆರೆ ಗೋದಾಮುಗಳಲ್ಲಿ ಸುಮಾರು 100 ಕ್ಕೂ ಹೆಚ್ಚು ಹಮಾಲರು ಕೆಲಸ ನಿರ್ವಹಿಸುತ್ತಿದ್ದಾರೆ.ಈ ಎಲ್ಲಾ ಕಾರ್ಮಿಕರಿಗೆ ತಿಂಗಳಲ್ಲಿ ಕನಿಷ್ಠ 8 - 10 ದಿನಗಳೂ ಕೂಡ ಕೆಲಸ ಸಿಗದೇ ಇರುವುದರಿಂದ ಇಎಸ್‌ಐ, ಪಿ.ಎಫ್. ಸೌಲಭ್ಯ ಸಿಗುತ್ತಿಲ್ಲ. ಜೀವನ ನಿರ್ವಹಣೆ ಕಷ್ಟವಾಗಿದ್ದು, ದಾವಣಗೆರೆ ಜಿಲ್ಲೆಯ ಕಾರ್ಮಿಕರಿಗೆ ಈ ಕೆಲಸವನ್ನು ವಹಿಸಬೇಕೆಂದು ಆಗ್ರಹಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ರೇಬೀಸ್ ವಿರೋಧಿ ಮಾಸಾಚರಣೆ

ಇಂದಿನಿಂದ ಬರುವ ಸೆಪ್ಟೆಂಬರ್ 12 ರವರೆಗೆ ಪಾಲಿ ಕ್ಲಿನಿಕ್ (ಜಿಲ್ಲಾ ಪಶು ಆಸ್ಪತ್ರೆ) ಆವರಣದಲ್ಲಿ ರೇಬೀಸ್ ವಿರೋಧಿ ಮಾಸಾಚರಣೆ ನಡೆಯಲಿದೆ. ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವನ್ನು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಹಮ್ಮಿಕೊಳ್ಳಲಾಗಿದೆ. ರಜಾ ದಿನಗಳಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ರವರೆಗೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ರಾಷ್ಟ್ರಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ.20 - ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, (ಬೆಂಗಳೂರು) ವತಿಯಿಂದ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು 2022ನೇ ಸಾಲಿನಲ್ಲಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ/ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿ ನೀಡಲಾಗುವುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 28 ಕೊನೆಯ ದಿನ ವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ದೂ.ಸಂ: 08192-263939 ನ್ನು ಸಂಪರ್ಕಿಸಬಹುದೆಂದು ಇಲಾಖೆ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಹಳೇಬಾತಿ ಆಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ಶಂಕುಸ್ಥಾಪನೆ

ದಾವಣಗೆರೆ, ಆ. 20- ಹಳೇಬಾತಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮಹಾದ್ವಾರ ನಿರ್ಮಾಣದ ಶಂಕು ಸ್ಥಾಪನೆಯನ್ನು ಶಾಸಕ ಎಸ್.ಎ. ರವೀಂದ್ರನಾಥ್ ಅವರು ನೆರವೇರಿಸಿದರು. ಶ್ರೀ ಆಂಜನೇಯ ಸ್ವಾಮಿ ಸೇವಾ ಸಮಿತಿ ಧರ್ಮದರ್ಶಿಗಳಾದ ಬೇವಿನಹಳ್ಳಿ ಮಂಜಪ್ಪ ಮತ್ತು ಗ್ರಾ.ಪಂ. ಅಧ್ಯಕ್ಷ ಕೆಂಚಪ್ಪ, ಗ್ರಾ.ಪಂ. ಸದಸ್ಯರುಗಳು, ರೈತ ಮೋರ್ಚಾದ ಬಾತಿ ಶಿವಕುಮಾರ್, ಬಿಜೆಪಿ ಉತ್ತರ ವಿಧಾನಸಭಾ ಉಪಾಧ್ಯಕ್ಷ ಸಿದ್ದೇಶ್ ಹಳೇಬಾತಿ, ಬೇವಿನಹಳ್ಳಿ ಪರಸಪ್ಪ, ಎ.ಬಿ. ಕಲ್ಲೇಶಪ್ಪ, ದಾಸರ ನಾಗರಾಜ್ ಉಪಸ್ಥಿತರಿದ್ದರು.



## ನಗರದಲ್ಲಿ ಇಂದು ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ

ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ನಿಯಮಿತದ ವಾರ್ಷಿಕ ಸಾಮಾನ್ಯ ಸಭೆಯು ಇಂದು ಬೆಳಿಗ್ಗೆ 12 ಗಂಟೆಗೆ ವಿದ್ಯಾನಗರದ ಶರಣ ಮಾಗನೂರು ಬಸಪ್ಪ ಸಭಾಭವನದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಅಧ್ಯಕ್ಷತೆ ವಹಿಸುವರು.



## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ 1) ಎಲ್.ಲಕ್ಷ್ಮಿ ನಾರಾಯಾಣ, 2) ಎಂ. ರಾಮಾನಾಯ್ಕ ಯಾನೆ ಎಂ.ಆರ್. ನಾಯ್ಕ 3) ಎಂ.ಎಸ್.ಯೋಗೇಶ್ 4) ಕೆ.ಶಿವಪ್ಪನಾಯ್ಕ, ಇತರೆ ಒಟ್ಟು ಸುಮಾರು 31 ಜನರು ಎಲ್ಲರೂ ಮಲ್ಲಾಪುರ ಗ್ರಾಮದ ವಾಸಿಗಳಾಗಿದ್ದು ಇವರುಗಳ ಪರ ನೀಡಿದ್ದ ಸಾರ್ವಜನಿಕ ಪ್ರಕಟಣೆ ಏನೆಂದರೆ,

ಮೇಲ್ಕಂಡ ಕಕ್ಷಿದಾರರು ಈ ಪ್ರಕಟಣೆಯ ಷೆಡ್ಯೂಲ್‌ನಲ್ಲಿ ತೋರಿಸಿರುವ ಜಮೀನುಗಳ ಜಂಟಿ ಹಕ್ಕುದಾರರು, ಸ್ವಾಧೀನಾನುಭವದಾರರು ಹಾಗೂ ಅನುಭವದಾರರಾಗಿರುತ್ತಾರೆ. ಈ ಬಗ್ಗೆ ನಮ್ಮ ಮೇಲ್ಕಂಡ 31 ಜನ ವಾದಿಯರು ಸೇರಿ ಅವರುಗಳ ಒಟ್ಟು ಕುಟುಂಬದ ಸದಸ್ಯರು ಅಂದರೆ ಆರ್. ಭಾನುಮತಿ, ನಾಗರಾಜ ನಾಯ್ಕ, ಗಣೇಶ ನಾಯ್ಕ ಹಾಗೂ ಇತರೆ 12 ಜನ ಪ್ರತಿವಾದಿಯರ ವಿರುದ್ಧ ದಾವಣಗೆರೆ ಹಿರಿಯ ವಿಭಾಗ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ: ಓ.ಎಸ್ ನಂ: 169:2022ನೇ ಕೇಸು ಹಾಕಿ ಷೆಡ್ಯೂಲ್‌ನಲ್ಲಿ ಕಂಡ ಎಲ್ಲಾ ಸೊತ್ತುಗಳಲ್ಲಿ ತಮ್ಮಗಳ ಭಾಗದ ಜಮೀನನ್ನು ವಿಭಜನೆ ಮಾಡಿ ಅಲಾಯಿದೆ ಸ್ವಾಧೀನ ಕೊಡಿಸಲು ಕೇಳಿದ್ದಾರೆ.

ಸದರಿ ಕೇಸಿನಲ್ಲಿ ನ್ಯಾಯಾಲಯವು ಮೇಲ್ಕಂಡ ಪ್ರತಿವಾದಿಯವರಿಗೆ ತುರ್ತು ಹುಕ್ಕುಂ ನೀಡಿ ನ್ಯಾಯಾಲಯಕ್ಕೆ ಹಾಜರಾಗಲು ತಿಳಿಸಿರುತ್ತದೆ ಹಾಗೂ ಷೆಡ್ಯೂಲ್ ಆಸ್ತಿಗಳ ಕ್ರಯ, ದಾನ, ಭೋಗ್ಯ, ಲೀಜ್ ಅಥವಾ ಇನ್ನಾವುದೇ ರೀತಿ 3ನೇಯವರಿಗೆ ಪರಭಾರೆ ಮಾಡದಂತೆ ಆದೇಶ ಮಾಡುವುದಾಗಿ ಸಮನ್ಸ್ ನೀಡಿ ತಿಳುವಳಿಕೆ ಕೊಟ್ಟಿರುತ್ತಾರೆ. ಷೆಡ್ಯೂಲ್ ಸೊತ್ತುಗಳು ನಮ್ಮ ಮೇಲ್ಕಂಡ ವಾದಿಯರಾದ 31 ಜನಗಳಿಗೆ ಹಾಗೂ 15 ಜನ ಪ್ರತಿವಾದಿಯವರಿಗೆ ಸೇರಿದ ಪಿತ್ರಾರ್ಜಿತವಾದ ಒಟ್ಟು ಕುಟುಂಬದ ಜಂಟಿ ಸ್ವಾಧೀನಾನುಭವದಲ್ಲಿರುವ ಜಮೀನುಗಳಾಗಿದ್ದು ಇದರಲ್ಲಿ ಮೇಲ್ಕಂಡ 31 ಜನ ವಾದಿಯರು ಅನುಭವದಾರರಾಗಿರುತ್ತಾರೆ. ಸದರಿ ಕೇಸಿನ ಮುದ್ದತ್ತು ದಿನಾಂಕ 2.9.2022ರಂದು ಇರುತ್ತದೆ.

ಈ ಮೇಲ್ಕಂಡ ಕಾರಣ, ಸಾರ್ವಜನಿಕರು ಯಾರೇ ಆಗಲಿ ಷೆಡ್ಯೂಲ್ ಸ್ವತ್ತುಗಳನ್ನು ಮೇಲ್ಕಂಡ 15 ಜನ ಪ್ರತಿವಾದಿಯವರಿಂದ ಕ್ರಯ, ದಾನ, ಭೋಗ್ಯ, ಲೀಜ್ ಇತರೆ ಯಾವುದೇ ರೀತಿಯ ಖರೀದಿ ಮಾಡಬಾರದಾಗಿ ಹಾಗೂ ವ್ಯವಹಾರ ಮಾಡಬಾರದಾಗಿ ಈ ತಿಳುವಳಿಕೆ ಕೊಟ್ಟಿರುತ್ತೇವೆ. ತಪ್ಪಿದಲ್ಲಿ ಮುಂದಿನ ಕ್ರಮಗಳಿಗೆ ನೀವು ಈಡಾಗುವುದಾಗಿ ಈ ಮೂಲಕ ಸಾರ್ವಜನಿಕ ತಿಳುವಳಿಕೆ ಕೊಟ್ಟಿರುತ್ತೇವೆ ಎಂದು ತಿಳಿಯಿರಿ.

**ಷೆಡ್ಯೂಲ್**

1) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ. ಸರ್ವೆ ನಂ.142ರಲ್ಲಿ ವಿಸ್ತೀರ್ಣ 17 ಎಕರೆ 19 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಸರ್ವೆ ನಂ : 141ರ ಜಮೀನು, ಪಶ್ಚಿಮಕ್ಕೆ : ಶಶಿ ಸೋಪ್ ಫ್ಯಾಕ್ಟರಿಯವರ ಜಮೀನು, ಉತ್ತರಕ್ಕೆ : ಅಂಜಿನಪ್ಪ ಹಾಗೂ ಲಿಂದಹಳ್ಳಿ ಬಸವರಾಜಪ್ಪನವರ ಜಮೀನು, ದಕ್ಷಿಣಕ್ಕೆ ಸರ್ವೆ ನಂ: 8ರ ಜಮೀನು. 2) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಅಕ್ಕಸಾಲಿ ದ್ಯಾಮಜ್ಜಿ ಹಳ್ಳಿ ಗಡಿ ರೀ. ಸರ್ವೆ ನಂ:6ರಲ್ಲಿ ವಿಸ್ತೀರ್ಣ 28 ಎಕರೆ 17 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಬೋರಗೊಂಡನಹಳ್ಳಿ ಉಜ್ಜಿನಪ್ಪನವರ ಜಮೀನು, ಪಶ್ಚಿಮಕ್ಕೆ : ಆಲೂರು ಗ್ರಾಮದ ರಸ್ತೆ, ಉತ್ತರಕ್ಕೆ : ಸರ್ವೆ ನಂ :8ರ ಜಮೀನು, ದಕ್ಷಿಣಕ್ಕೆ : ಬೋರಗೊಂಡನಹಳ್ಳಿ ಹಾಲಪ್ಪ ಮತ್ತು ರೇವಣಸಿದ್ದಪ್ಪನವರ ಜಮೀನು. 3) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಅಕ್ಕಸಾಲಿ ದ್ಯಾಮಜ್ಜಿಹಳ್ಳಿ ಗಡಿ ರೀ. ಸರ್ವೆ ನಂ :8:1ರಲ್ಲಿ ವಿಸ್ತೀರ್ಣ 24 ಎಕರೆ 23 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಮೇಗಳ ಮನೆ ಕಾಟಪ್ಪನವರ ಜಮೀನು, ಪಶ್ಚಿಮಕ್ಕೆ : ದಾವಣಗೆರೆ ಮಹಮ್ಮದ್ ಸಾಬ್‌ರವರ ಜಮೀನು, ಉತ್ತರಕ್ಕೆ : ಸರ್ವೆ ನಂ : 142ರ ಜಮೀನು, ದಕ್ಷಿಣಕ್ಕೆ ಸರ್ವೆ ನಂ : 6ರ ಜಮೀನು. 4) ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಆಲೂರು ಗ್ರಾಮದ ರೀ. ಸರ್ವೆ ನಂ : 141:5 ರಲ್ಲಿ ವಿಸ್ತೀರ್ಣ 4 ಎಕರೆ 17 ಗುಂಟೆ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಬಾತಾ ಬಸವಣ್ಣನವರ ಜಮೀನು ಪಶ್ಚಿಮಕ್ಕೆ : ಸರ್ವೆ ನಂ :142ರ ಜಮೀನು ಉತ್ತರಕ್ಕೆ : ಚೌಡಪ್ಪನವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ : 8ರ ಜಮೀನು.

**ಶ್ರೀ ಏಕನಾಥ್ .ಡಿ.ರಾಯ್ಕರ್, ವಕೀಲರು,**
ಮನೆ ನಂ:327, ಅಕ್ಕಮಹಾದೇವಿ ರಸ್ತೆ,
ಪಿ.ಜೆ ಬಡಾವಣೆ, ದಾವಣಗೆರೆ 577002.
**ಮೊಬೈಲ್ ನಂ : 98440 20566**

ಸ್ಥಳ : ದಾವಣಗೆರೆ,
ದಿನಾಂಕ : 20.8.2022





बैंक ऑफ़ इंडिया
Bank of India

**ಶಾಖೆ : ದಾವಣಗೆರೆ**

## ಸ್ಥಿರಾಸ್ತಿ ಸ್ವಾಧೀನ ನೋಟೀಸ್ (ರೂಲ್-8 (1)

ಕೆಳ ಕಾಣಿಸಿದ ಸಹಿದಾರರು ಬ್ಯಾಂಕ್ ಆಫ್ ಇಂಡಿಯಾ, ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು 2002ನೇ ವಿತ್ತ ಸೊತ್ತುಗಳ ಭದ್ರತಾ ವ್ಯಾಪ್ತಿಗೊಳಪಡಿಸುವಿಕೆ ಹಾಗೂ ಪುನರ್ ನಿರ್ಮಾಣ ಮತ್ತು ಸಕ್ರಿಯ ಜಾರಿ ಕಾಯ್ದೆ (ಸರ್ಫೇಸಿ)ಯ ಪ್ರಕರಣ 13 (12)ರ ಮತ್ತು 2002ನೇ ಭದ್ರತಾಸಕ್ತಿ ಜಾರಿ ನಿಯಮಗಳ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಾಲ ಮರುಪಾವತಿ ಬೇಡಿಕೆ ನೋಟೀಸನ್ನು ದಿನಾಂಕ : 06.12.2021 ರಂದು ಸಾಲಗಾರರಾದ : ಮೆ॥ ಬಿಆರ್‌ಎಸ್ ಇಂಜಿನಿಯರಿಂಗ್ ವರ್ಕ್ಸ್ ಇದರ ಮಾಲೀಕರಾದ ಶ್ರೀ ರಿಯಾಝು ಅಹ್ಮದ ತಂದೆ : ಪೋತಿ ಇಮಾಮ ಸಾಬ್. ಇವರಿಗೆ ನೀಡಿದ್ದು, ನೋಟಿಸಿನಲ್ಲಿ ಕಾಣಿಸಿದ ಮೊಬಲಗು ರೂ. 14,57,093.37 (ರೂಪಾಯಿ ಹದಿನಾಲ್ಕು ಲಕ್ಷದ ಐವತ್ತೇಳು ಸಾವಿರದ ತೊಂಬತ್ತ ಮೂರು ಮತ್ತು ಪೈಸೆ ಮೂವತ್ತೇಳು) ಮತ್ತು 20.10.2019 ರಿಂದ ತಿಂಗಳ ಆಧಾರದ ಮೇಲೆ ಶೇಕಡ 12.10. ರಂತೆ ವಾರ್ಷಿಕ ಬಡ್ಡಿಯನ್ನು ನೋಟಿಸ್ ತಲುಪಿದ 60 ದಿನಗಳ ಒಳಗಾಗಿ ಮರು ಪಾವತಿಸಲು ಸೂಚಿಸಲಾಗಿತ್ತು.

ಸಾಲಗಾರರು ಮೊತ್ತವನ್ನು ಸಂದಾಯ ಮಾಡುವಲ್ಲಿ ವಿಫಲರಾಗಿದ್ದು, ಸಾಲಗಾರರು ಹಾಗೂ ಸಾರ್ವಜನಿಕರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ಸಹಿ ಮಾಡಿದವರು ಸದರಿ ಕಾಯ್ದೆಯ ಕಲಂ 13 (4) ಹಾಗೂ ನಿಯಮ 8 ರಡಿಯಲ್ಲಿ ಪ್ರದತ್ತ ಅಧಿಕಾರದನ್ವಯ ಕೆಳಗೆ ವಿವರಿಸಿದ ಸ್ಥಿರಾಸ್ತಿಯ ಸ್ವಾಧೀನತೆಯನ್ನು ದಿನಾಂಕ : 16.08.2022 ರಂದು ಪಡೆದುಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಆಸ್ತಿಯೊಂದಿಗೆ ವ್ಯವಹರಿಸದಂತೆ ಎಚ್ಚರಿಸುತ್ತಿದ್ದೇವೆ ಹಾಗೂ ಒಂದು ವೇಳೆ ವ್ಯವಹರಿಸಿದ್ದೇ ಆದರೆ ಅಂತಹ ಯಾವುದೇ ವ್ಯವಹಾರಗಳು ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ಶಾಖೆಗೆ ಸಂದಾಯವಾಗುವ ಮೊಬಲಗು ರೂ. 14,57,093.37 ಮತ್ತು ಬಡ್ಡಿ ಇವುಗಳಿಗೆ ಋಣಭಾರವಾಗಿರುತ್ತದೆ.

ಭದ್ರತಾ ಸ್ವತ್ತುಗಳ ಮರು ಗಳಿಕೆಗಾಗಿ ಸಮಯ ಲಭ್ಯತೆ ಸಂಬಂಧವಾಗಿ ಕಾಯಿದೆಯ ಪ್ರಕರಣ 13ರ ಉಪ ಪ್ರಕರಣ (8) ರ ಉಪಬಂಧಗಳ ಬಗ್ಗೆ ಸಾಲಗಾರರ ಗಮನ ಸೆಳೆಯಲಾಗಿದೆ.

**ಸ್ಥಿರಾಸ್ತಿ ವಿವರ :** ಶ್ರೀ ರಿಯಾಝು ಅಹ್ಮದ ತಂದೆ : ಪೋತಿ ಇಮಾಮ ಸಾಬ ಇವರ ಹೆಸರಿನಲ್ಲಿರುವ, ದಾವಣಗೆರೆ, ಪಿ.ಬಿ. ರಸ್ತೆ, 9ನೇ ಡಿವಿಸನ್, 5ನೇ ವಾರ್ಡ್, ಡೋರ್ ನಂ. 866/3ಸಿ-33, ಸೈಟ್ ನಂ. 33ರ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ : 15 ಅಡಿ, ಉತ್ತರ-ದಕ್ಷಿಣ : 40.6x41.8/2 ಅಡಿ, ವಿಸ್ತೀರ್ಣ 615.90 ಚ.ಅಡಿ ಮತ್ತು ಇದರ ಚಕ್ಕುಬಂದಿ ಉತ್ತರ : ಸ್ಮಶಾನ ಭೂಮಿ, ದಕ್ಷಿಣ : ರಸ್ತೆ, ಪೂರ್ವ : ಸೈಟ್ ನಂ. 34, ಪಶ್ಚಿಮ : ಸೈಟ್ ನಂ. 32.

**ದಿನಾಂಕ : 16.08.2022**
**ಸ್ಥಳ : ದಾವಣಗೆರೆ.**

**ಸಹಿ/-ಅಧಿಕೃತ ಅಧಿಕಾರಿ**
**ಬ್ಯಾಂಕ್ ಆಫ್ ಇಂಡಿಯಾ**

# ರಾಜೀವ್‌ಗಾಂಧಿ ಆಧುನಿಕ ಭಾರತದ ಪಿತಾಮಹ

## ಮಲೇಬೆನ್ನೂರು : ರಾಜೀವ್, ಅರಸು ಜನ್ಮ ದಿನಾಚರಣೆಯಲ್ಲಿ ಶಾಸಕ ರಾಮಪ್ಪ



ಮಲೇಬೆನ್ನೂರು, ಆ.20- ರಾಜೀವ್ ಗಾಂಧಿ ಅವರು ಈ ದೇಶದ ಪ್ರಧಾನಿಯಾಗಿ ನೀಡಿದ ಜನಪರ ಯೋಜನೆಗಳು ಇಂದಿಗೂ ಹಚ್ಚ ಹಸಿರಾಗಿವೆ ಎಂದು ಶಾಸಕ ಎಸ್.ರಾಮಪ್ಪ ಹೇಳಿದರು. ಅವರು, ಶನಿವಾರ ಪಟ್ಟಣದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದಿಂದ ಹಮ್ಮಿಕೊಂಡಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶಕ್ಕೆ ತಂತ್ರಜ್ಞಾನವನ್ನು ಪರಿಚಯಿಸುವ ಮೂಲಕ ಆಧುನಿಕ ಭಾರತದ ಪಿತಾಮಹ ಆಗಿರುವ ರಾಜೀವ್ ಗಾಂಧಿ ಅವರು, ದೇಶದ ಬಡ ಜನರ ಏಳಿಗೆಗಾಗಿ ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ರಾಜ್ಯದಲ್ಲಿ 2 ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವ ದೇವರಾಜ ಅರಸು ಅವರು ಈ ನಾಡು ಕಂಡು ಅಪರೂಪದ ಜನ ನಾಯಕರಾಗಿ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಅವರ ಹತ್ತು ಹಲವು ಯೋಜನೆಗಳು ಇಂದಿಗೂ ಜನರಿಗೆ ಸಿಗುತ್ತಿವೆ. ಅಂತಹ ಧೀಮಂತ ವ್ಯಕ್ತಿಯ ಹಾದಿಯಲ್ಲಿ ಈಗಿನ ಸಿದ್ದರಾಮಯ್ಯ ಅವರು ಸಾಗುತ್ತಿದ್ದಾರೆ ಎಂದು ಶಾಸಕ ರಾಮಪ್ಪ ಹೇಳಿದರು.

ನರೇಂದ್ರ ಮೋದಿ ಅವರು ಶ್ರೀಮಂತರ ಪರ ಆಡಳಿತ ನೀಡುತ್ತಿದ್ದು, ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕೆಂಬ ಉದ್ದೇಶದಲ್ಲಿ ಕೋಮು ಗಲಭೆ ಸೃಷ್ಟಿಸುತ್ತಿದೆ ಎಂದು ಅವರು ಆರೋಪಿಸಿದರು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಜಿ.ಪಂ. ಮಾಜಿ ಸದಸ್ಯರೂ ಆದ ವಕೀಲ ಎಂ.ನಾಗೇಂದ್ರಪ್ಪ ಮಾತನಾಡಿ, ರಾಜೀವ್ ಗಾಂಧಿ ಅವರು, 18 ವರ್ಷದ ಯುವಕರಿಗೆ ಮತದಾನದ ಹಕ್ಕು ನೀಡುವ ಮೂಲಕ ಯುವಕರು ರಾಜಕಾರಣಕ್ಕೆ ಬರಲು ಪ್ರೇರೇಪಿಸಿದರು.

ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಮುಖಂಡ ಕುಂಬಳೂರು ವಿರೂಪಾಕ್ಷಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ವಿದ್ಯಾ, ಪುರಸಭೆ ಸದಸ್ಯ ಕೆ.ಜಿ. ಲೋಕೇಶ್, ಎಂ.ಬಿ.ಫೈಜು ಮಾತನಾಡಿದರು.

ತಾ.ಪಂ ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್, ಹಳ್ಳಿಹಾಳ್ ವೀರನಗೌಡ, ಕುಂಬಳೂರು ವಾಸು, ಪುರಸಭೆ ಸದಸ್ಯರಾದ ಮಾಜೀದ್, ನಯಾಜ್, ಸಾಬೀರ್ ಅಲಿ, ಖಲೀಲ್, ಚಮನ್, ಶಬ್ಬೀರ್‌ಖಾನ್, ಎಂ.ಬಿ.ರುಸ್ತುಂ, ಎಸ್‌ಡಿಎಂಸಿ ಅಧ್ಯಕ್ಷ ನಯಾಜ್, ಎಳೆಹೊಳೆ ಕುಮಾರ್, ಡಿ.ಕೆ.ಸಿದ್ದನಗೌಡ, ಎ. ಆರೀಫ್ ಅಲಿ, ನಂದಿತಾವರೆ ರೇವಣಪ್ಪ, ಕೊಟ್ರೇಶ್ ನಾಯ್ಕ, ಹಳ್ಳಿಹಾಳ್ ಚಂದ್ರಶೇಖರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಕಾಂಗ್ರೆಸ್ ಹಿಂದುಳಿದ ವಿಭಾಗದ ಅಧ್ಯಕ್ಷ ಕೆ.ಪಿ.ಗಂಗಾಧರ್ ಸ್ವಾಗತಿಸಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್ ವಂದಿಸಿದರು.

# ಚಿಗಟೇರಿಯಲ್ಲಿ ಶಿವನಾರದ ಮುನಿಗೆ ಶ್ರಾವಣ ಮಾಸದ ಪೂಜೆ





ಹರಪನಹಳ್ಳಿ, ಆ.20- ಶ್ರೀ ಕ್ಷೇತ್ರ ಚಿಗಟೇರಿಯ ಶ್ರೀ ಶಿವನಾರದಮುನಿ ಸ್ವಾಮಿಯ ಶ್ರಾವಣ ಮಾಸದ ಕಡೆ ಶನಿವಾರದ ವಿಶೇಷ ಪೂಜೆ ಹಾಗೂ ಅನ್ನದಾಸೋಹ ಕಾರ್ಯಕ್ರಮವು ಇಂದು ವಿಜೃಂಭಣೆಯಿಂದ ಜರುಗಿತು. ಸುಮಾರು 15000 ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾ ಗಿತ್ತು. ಶ್ರೀ ಕ್ಷೇತ್ರದಲ್ಲಿ ಒಂದೂವರೆ ಕೋಟಿ ರೂ. ವೆಚ್ಚದ ಸಮುದಾಯ ಭವನದ ಕಾಮಗಾರಿ ಪ್ರಗತಿ ಯಲ್ಲಿದೆ. ಇನ್ನೊಂದು ತಿಂಗಳಲ್ಲಿ ಉದ್ಘಾಟನೆಗೊಳ್ಳ ಲಿದೆ. ಪ್ರತಿ ಅಮಾವಾಸ್ಯೆಗೆ ಅನ್ನ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ನಾರದ ಮುನಿ ಟ್ರಸ್ಟ್‌ನ ಅಧ್ಯಕ್ಷ ಅಣಬೇರು ರಾಜಣ್ಣ, ಶಾಮನೂರು ಬಸಣ್ಣ, ಒಡ್ಡಿನಲ್ಲಿ ಷಡಕಪ್ಪ, ಆವರಗೆರೆ ಈಶಣ್ಣ, ಕಲಪನಹಳ್ಳಿ ಬಸವಲಿಂಗಪ್ಪ, ವೇದಮೂರ್ತಿ, ಜಾತಪ್ಪ, ಪಲ್ಲಾಗಟ್ಟೆ ನಾಗರಾಜ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಹಿಂದೂ ರಾಷ್ಟ್ರ ಸೇನಾ ಜಿಲ್ಲಾ ಘಟಕ ಉದ್ಘಾಟನೆ

ದಾವಣಗೆರೆ, ಆ.20- ಹಿಂದೂ ರಾಷ್ಟ್ರ ಸೇನೆ ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭವನ್ನು ನಾಳೆ ದಿನಾಂಕ 21ರ ಭಾನುವಾರ ಬೆಳಿಗ್ಗೆ 11ಕ್ಕೆ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ದೇಶ, ಧರ್ಮದ ವಿಷಯದಲ್ಲಿ ಸಮಸ್ಯೆ ಎದುರಾದಾಗ ನಮ್ಮ ಸೇನೆ ಸ್ಪಂದಿಸುವ ಕೆಲಸ ಮಾಡುತ್ತಿದೆ ಎಂದು ಹಿಂದೂ ರಾಷ್ಟ್ರ ಸೇನೆಯ ರಾಜ್ಯ ಅಧ್ಯಕ್ಷ ಕೆ.ಎನ್. ಸಂದೀಪ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 10.30ಕ್ಕೆ ನಗರದ ರಾಂ ಅಂಡ್ ಕೋ ಸರ್ಕಲ್‌ನ ವರಸಿದ್ದಿ ವಿನಾಯಕ ಮಂದಿರದಲ್ಲಿ ಸೇನೆಯ ರಾಷ್ಟ್ರೀಯ ಹಾಗೂ ಸಂಸ್ಥಾಪಕ ಅಧ್ಯಕ್ಷ ಧನಂಜಯ್ ಜಯರಾಂ ದೇಸಾಯಿ ಪೂಜೆ ಸಲ್ಲಿಸಲ್ಲಿದ್ದಾರೆ. ನಂತರ ಪಾದಯಾತ್ರೆಯು ಕಾರ್ಯಕ್ರಮದ ಸ್ಥಳ ತಲುಪಲಿದೆ.

ಮುಖ್ಯ ಅತಿಥಿಗಳಾಗಿ ಐರಣಿ ಹೊಳೆಮಠದ ಶ್ರೀ ಜಗದ್ಗುರು ಬಸವರಾಜ ದೇಶೀಕೇಂದ್ರ ಸ್ವಾಮೀಜಿ, ಪುಣ್ಯಕೋಟಿ ಮಠದ ಬಾಲಯೋಗಿ ಜಗದೀಶ್ವರ ಸ್ವಾಮೀಜಿ, ಕಾಳಿಮಠದ ಶ್ರೀ ಋಷಿಕುಮಾರ್ ಸ್ವಾಮೀಜಿ, ಪರಶುರಾಂ ನಡುಮನೆ, ಶ್ರೀರಾಮ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಪರಶುರಾಮ ನಡುಮನೆ, ಕೆ.ಎನ್.ಸಂದೀಪ್ ಭಾಗವಹಿಸಲಿದ್ದಾರೆ.

ಗೋಷ್ಠಿಯಲ್ಲಿ ಸೇನೆಯ ಶ್ರೀಕಾಂತ್, ಸೋಮಶೇಖರ್, ದಯಾನಂದ್ ರಾಯ್ಕರ್, ಹೆಚ್. ರಾಮಣ್ಣ, ಗೊಲ್ಲಾಳಪ್ಪ ಎಸ್. ಪಾಟೀಲ್ ಹಾಗೂ ಎ. ಆರ್. ರೇವಣಸಿದ್ದಪ್ಪ ಸೇರಿದಂತೆ, ಇತರರು ಇದ್ದರು.

## ಸಂತ ಪೌಲರ ವಿದ್ಯಾಸಂಸ್ಥೆಯಲ್ಲಿ ಇಂದು ಅಮೃತ ಮಹೋತ್ಸವ

ದಾವಣಗೆರೆ : ನಗರದ ಪಿ.ಜೆ. ಬಡಾವಣೆಯಲ್ಲಿರುವ ಸಂತ ಪೌಲರ ವಿದ್ಯಾಸಂಸ್ಥೆಯ ಶಾಲಾ ಆವರಣದಲ್ಲಿ ಅಮೃತ ಮಹೋತ್ಸವ ಸಮಾರಂಭ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸುವರು. ಅಧ್ಯಕ್ಷತೆಯನ್ನು ಡಾ. ಸಿಸ್ಟರ್ ಕ್ರಿಸ್ ವಹಿಸುವರು. ವಿಶೇಷ ಆಹ್ವಾನಿತರಾಗಿ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ., ಸಿಸ್ಟರ್ ಬರ್ನೀಸ್ ತೆರೇಸ್, ಸಿಸ್ಟರ್ ಜೋಸ್ ಲಿನೆಟ್, ಸಿಸ್ಟರ್ ಅಲ್ಬಿನಾ, ಬಿ.ಸಿ. ಸಂಸದ ಜಿ. ಎಂ. ಸಿದ್ದೇಶ್ವರ, ಸಚಿವರಾದ ಭೈರತಿ, ಶಾಸಕ ರವೀಂದ್ರನಾಥ್, ಪಾಲಿಕೆ ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಜಿ.ಪಂ. ಸಿಇಓ ಡಾ. ಎ. ಚೆನ್ನಪ್ಪ ಆಗಮಿಸುವರು.

ಗೌರವಾನ್ವಿತ ಅತಿಥಿಗಳಾಗಿ ರೆ.ಫಾ. ಅಂತೋಣಿ ನಜರೇತ್, ರೆ.ಫಾ. ಡಾ. ಅಂತೋಣಿ ಪೀಟರ್, ಜಿಲ್ಲಾ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ವಿಶ್ವನಾಥ್ ಪಿ. ಮುದಜ್ಜಿ, ಶಿವರಾಜ್ ಎನ್., ತಿಪ್ಪೇಶಪ್ಪ, ಹೆಚ್.ಕೆ. ಲಿಂಗರಾಜ್, ನಿರಂಜನಮೂರ್ತಿ, ಅಜಯ್‌ಕುಮಾರ್, ಶ್ರೀಮತಿ ವಸಂತ ಕಾಂತರಾಜ್ ಆಗಮಿಸುವರು. ವಿಶೇಷ ಹಳೆಯ ವಿದ್ಯಾರ್ಥಿಗಳಾದ ದಿನೇಶ್ ಕೆ. ಶೆಟ್ಟಿ, ಬಿ.ಪಿ. ಹರೀಶ್, ಡಾ. ಶುಕ್ಲಾ ಶೆಟ್ಟಿ, ಕು. ಜಯಮ್ಮ ಹೆಚ್. ಸಿ., ಶ್ರೀಮತಿ ಏಂಜಲ್ ಮೇರಿ ಜೋಸೆಫ್ ಆಗಮಿಸುವರು.

## ನಾಳೆ ವರವಿ ಮೌನೇಶ್ವರ ಜಾತ್ರೆ

ಗದಗ, ಆ.20- ಶಿರಹಟ್ಟಿ ತಾಲ್ಲೂಕಿನಲ್ಲಿರುವ ಶ್ರೀ ಕ್ಷೇತ್ರ ವರವಿ ಶ್ರೀ ಮೌನೇಶ್ವರ ಜಾತ್ರಾ ಮಹೋತ್ಸವವು ನಾಡಿದ್ದು ದಿನಾಂಕ 22 ರಿಂದ 26ರವರೆಗೆ ನಡೆಯಲಿದೆ ಎಂದು ಶ್ರೀ ಜಗದ್ಗುರು ಮೌನೇಶ್ವರ ದೇವಸ್ಥಾನ ಹಾಗೂ ಮಠದ ವಿಕಾಸ ಟ್ರಸ್ಟ್ ಕಮಿಟಿ ತಿಳಿಸಿದೆ.

FOR RENT/SALE
POLYCLINIC/HEALTH CARE CENTER
Individual rooms for 2-3 Doctors with space available for pharmacy, Laboratory
7th Main, P.J. Extension, Near Sandeep Nursing Home
98866 18889, 98864 49966

ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.
ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400
8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.

ಹೊಯ್ಸಳ ಕಾಲದ ಶಿಲ್ಪಕಲೆಯಿಂದ ಕೂಡಿದ ಐತಿಹಾಸಿಕ



|| ಶ್ರೀ ಬಸವೇಶ್ವರ ಪ್ರಸನ್ನ ||



ಶ್ರೀ ಕ್ಷೇತ್ರ ಆನೆಕೊಂಡ ಬಸವೇಶ್ವರ ದೇವಸ್ಥಾನದಲ್ಲಿ ದಿನಾಂಕ 22.08.2022 ರ ಶ್ರಾವಣ ಮಾಸದ ಕಡೇ ಸೋಮವಾರದಂದು
ಶ್ರೀ ಬಸವೇಶ್ವರ ಮತ್ತು ನೀಲಾನಹಳ್ಳಿ ಶ್ರೀ ಆಂಜನೇಯ ಸ್ವಾಮಿ ಮತ್ತು ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಿ ಹಾಗೂ ಸುತ್ತಮುತ್ತಲಿನ ಗ್ರಾಮದ ದೇವರುಗಳನ್ನೊಳಗೊಡಿ
ಸಂಜೆ 4.00 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮೂಲಕ ಸಂಚರಿಸಿ, ಸಂಜೆ 6.00 ಗಂಟೆಗೆ ನಡೆಯುವ
ಕಾರಣಿಕ ಮಹೋತ್ಸವಕ್ಕೆ
ಸರ್ವ ಭಕ್ತಾದಿಗಳಿಗೆ ಭಕ್ತಿಪೂರ್ವಕ ಸುಸ್ವಾಗತ
ಆಡಳಿತ ಮಂಡಳಿ, ಶ್ರೀ ಬಸವೇಶ್ವರ ಮುಜರಾಯಿ ಸಮಿತಿ (ರಿ), ಶ್ರೀ ಕ್ಷೇತ್ರ ಆನೆಕೊಂಡ ಮತ್ತು ಗ್ರಾಮಸ್ಥರು

# ಆಪ್ ಮೂಲಕ ಸಾಲದ ನೆಪದಲ್ಲಿ ವಂಚನೆ

## ಭಾರತೀಯರನ್ನು ವಂಚಿಸಿ ಚೀನಾಕ್ಕೆ ಹಣ ರವಾನಿಸುತ್ತಿದ್ದ 22 ಜನರ ಬಂಧನ

**ಚಿಲ್ಲರೆ ಹಣ ಕೊಟ್ಟು ಮೊಬೈಲ್‌ನಿಂದ ಮಾಹಿತಿ ಕಳವು**

**ಸಾಲ ಪಡೆದವರ ನಕಲಿ ಬೆತ್ತಲೆ ಚಿತ್ರ ಮಾಡಿ ಬ್ಲಾಕ್‌ಮೇಲ್**

**ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ 500 ಕೋಟಿ ರೂ.ಗಳಿಗೂ ಹೆಚ್ಚು ವಸೂಲಿ**

ನವದೆಹಲಿ, ಆ. 20 – ಎರಡು ತಿಂಗಳ ಕಾಲ ಕಾರ್ಯಾಚರಣೆ ನಡೆಸಿರುವ ದೆಹಲಿ ಪೊಲೀಸರು, ಆಪ್‌ಗಳ ಮೂಲಕ ತುರ್ತು ಸಾಲ ನೀಡಿ ಜನರನ್ನು ವಂಚಿಸುತ್ತಿದ್ದ 22 ಜನರನ್ನು ಬಂಧಿಸಿದ್ದಾರೆ. ಇವರು 500 ಕೋಟಿ ರೂ.ಗಳಿಗೂ ಹೆಚ್ಚು ಸಾಲ ಮತ್ತು ಹಣ ವಸೂಲಿ ದಂಧೆ ನಡೆಸಿದ್ದರು.

ಚೀನೀಯರ ಪರವಾಗಿ ಈ ತಂಡ ಕಾರ್ಯ ನಿರ್ವಹಿಸುತ್ತಿತ್ತು. ವಸೂಲಿ ಮಾಡಿದ ಹಣವನ್ನು ಹವಾಲಾ ಹಾಗೂ ಕ್ರಿಪ್ಟೋ ಕರೆನ್ಸಿ ಮೂಲಕ ಚೀನಾಗೆ ರವಾನಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ತಂಡ ತುರ್ತು ಸಾಲ ನೀಡಿ ಭಾರೀ ಬಡ್ಡಿ ದರ ವಸೂಲಿ ಮಾಡುತ್ತಿತ್ತು. ಸಾಲ ಮರು ಪಾವತಿ ಮಾಡಿದ ನಂತರ ಈ ತಂಡ, ಸಾಲ ಪಡೆದವರ ಚಿತ್ರಗಳನ್ನು ನಗ್ನವಾಗಿರುವ ರೀತಿ ಮಾರ್ಫ್ ಮಾಡಿ ಬ್ಲಾಕ್‌ಮೇಲ್ ಮೂಲಕ ಹಣ ವಸೂಲಿ ಮಾಡುತ್ತಿತ್ತು.

ದೆಹಲಿ ಪೊಲೀಸರ ಬಳಿ ಈ ರೀತಿಯ ಕೃತ್ಯಗಳ ನೂರಾರು ದೂರುಗಳು ದಾಖಲಾಗಿದ್ದವು. ಐ.ಎಫ್. ಎಸ್.ಓ. ದಳ ಈ ಬಗ್ಗೆ ತನಿಖೆ ನಡೆಸಿ ವಂಚಕರ ತಂಡ ಬಯಲಿಗೆ ಎಳೆದಿದೆ. ಇವರು ಹಲವಾರು ಆಪ್‌ಗಳನ್ನು ಬಳಸಿ ಹಣ ವಸೂಲಿ ಮಾಡುತ್ತಿದ್ದುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಈ ಆಪ್‌ಗಳನ್ನು ಮೊಬೈಲ್‌ನಲ್ಲಿ ಅಳವಡಿಕೆ ಮಾಡುವಾಗ ಹಲವಾರು ಅನುಮತಿಗಳನ್ನು ಪಡೆಯಲಾಗುತ್ತಿತ್ತು. ಸಂಪರ್ಕ ಸಂಖ್ಯೆ, ಚಾಟ್, ಮೆಸೇಜ್ ಹಾಗೂ ಚಿತ್ರಗಳನ್ನು ನೋಡಲು ಅನುಮತಿ ಪಡೆಯಲಾಗುತ್ತಿತ್ತು. ನಂತರ ವಂಚಕರು ಈ ಮಾಹಿತಿಗಳನ್ನು ಚೀನಾ ಹಾಗೂ ಹಾಂಕಾಂಗ್‌ನಲ್ಲಿರುವ ಸರ್ವರ್‌ಗಳಿಗೆ ಅಪ್‌ಲೋಡ್ ಮಾಡುತ್ತಿದ್ದರು.

ಗ್ರಾಹಕರಿಂದ ಪಡೆದ ಮಾಹಿತಿ ಬಳಸಿ ಅವರು ಹಲವಾರು ನಕಲಿ ಐ.ಡಿ.ಗಳನ್ನು ಸೃಷ್ಟಿ ಮಾಡುತ್ತಿದ್ದರು. ಮಾರ್ಫ್ ಮಾಡಿದ ನಗ್ನ ಚಿತ್ರಗಳನ್ನು ಇಂಟರ್‌ನೆಟ್‌ನಲ್ಲಿ ಹಾಕುವುದಾಗಿ ಬೇರೆ ಬೇರೆ ಸಂಖ್ಯೆಗಳಿಂದ ಬೆದರಿಸಿ ಹಣ ವಸೂಲಿ ಮಾಡುತ್ತಿದ್ದರು ಎಂದು ಐ.ಎಫ್.ಎಸ್.ಓ.ದ ಅಧಿಕಾರಿ ಕೆ.ಪಿ.ಎಸ್. ಮಲ್ಹೋತ್ರ ತಿಳಿಸಿದ್ದಾರೆ.

ಸಾಮಾಜಿಕ ಕಳಂಕದ ಭೀತಿಯಿಂದ ಬಳಕೆದಾರರು ಹಣ ನೀಡುತ್ತಿದ್ದರು. 5 ಇಲ್ಲವೇ 10 ಸಾವಿರದಷ್ಟು ಸಣ್ಣ ಮೊತ್ತದ ಹಣ ಪಡೆದವರು, ಲಕ್ಷಾಂತರ ರೂ.ಗಳನ್ನು ತೆರುವ ಪರಿಸ್ಥಿತಿ ಉಂಟಾಗಿತ್ತು. ಇಷ್ಟೊಂದು ಹಣ ಕೊಡಲಾಗದೇ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳೂ ನಡೆದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ವಂಚಕರು ನಕಲಿ ಐ.ಡಿ.ಗಳ ಮೂಲಕ ಹಲವಾರು ಖಾತೆಗಳನ್ನು ತೆರೆದಿದ್ದಾರೆ. ಪ್ರತಿಯೊಂದು ಖಾತೆಗೂ ದಿನಕ್ಕೆ ಕೋಟಿ ರೂ. ಗಳಿಗೂ ಹೆಚ್ಚು ಹಣ ಬರುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಈ ವಂಚಕರ ಜಾಲ ದೆಹಲಿ, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿ ಹರಡಿತ್ತು. ಈ ಜಾಲದಲ್ಲಿ ತೊಡಗಿದ್ದ 22 ಜನರನ್ನು ಬಂಧಿಸಲಾಗಿದ್ದು, ಇವರಲ್ಲಿ ಇಬ್ಬರು ಮಹಿಳೆಯರು.

ಚೀನಾದ ನಾಗರಿಕರ ಪರವಾಗಿ ಕೆಲಸ ಮಾಡುತ್ತಿದ್ದುದಾಗಿ ವಿಚಾರಣೆ ವೇಳೆ ಬಂಧಿತರು ತಿಳಿಸಿದ್ದಾರೆ. ಭಾರತದಲ್ಲಿ ಪಡೆಯಲಾಗುತ್ತಿದ್ದ ಎಲ್ಲ ಮಾಹಿತಿಯನ್ನು ಇವರು ಚೀನಾದ ಸರ್ವರ್‌ಗಳಿಗೆ ರವಾನಿಸುತ್ತಿದ್ದರು. ಪ್ರಕರಣದಲ್ಲಿ ಭಾಗಿಯಾದ ಕೆಲ ಚೀನಾದ ನಾಗರಿಕರನ್ನು ಗುರುತಿಸಲಾಗಿದ್ದು, ಅವರ ಬಂಧನಕ್ಕೆ ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಕಾರ್ಯಾಚರಣೆ ಆರಂಭಿಸಿದ ನಂತರ ವಂಚಕರು ಹಣವನ್ನು ಪಾಕಿಸ್ತಾನ, ನೇಪಾಳ ಹಾಗೂ ಬಾಂಗ್ಲಾದೇಶಗಳಿಗೆ ರವಾನಿಸಿದ್ದಾರೆ. ಇದುವರೆಗೂ 500 ಕೋಟಿ ರೂ.ಗಳನ್ನು ಚೀನಾದ ಜನರು ಕಬಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

# ನಗರದಲ್ಲಿ ಇಂದು ಶ್ರೀ ಅನ್ನದಾನೇಶ್ವರ ಮಠದ ಶ್ರೀ ಅನ್ನದಾನ ಶಿವಯೋಗಿಗಳ 45ನೇ ಪುಣ್ಯಾರಾಧನೆ





ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಲಿಂ. ಶ್ರೀ ಗುರು ಅನ್ನದಾನ ಶಿವಯೋಗಿಗಳವರ 45ನೇ ಪುಣ್ಯಾರಾಧನೆ ಮತ್ತು ಕಾಯಕಯೋಗಿ ತ್ರಿವಿಧ ದಾಸೋಹಿ ಲಿಂ॥ ಡಾ. ಅಭಿನವ ಅನ್ನದಾನಿ ಮಹಾಸ್ವಾಮಿಗಳವರ ಪ್ರಥಮ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವು ಶ್ರೀ ಅನ್ನದಾನೀಶ್ವರ ಶಾಖಾ ಮಠದಲ್ಲಿ ಇಂದು ನಡೆಯಲಿದೆ.

ಅಲ್ಲದೇ, ಬೆಳಿಗ್ಗೆ 10-30ಕ್ಕೆ ಶ್ರೀ ಮಠದ ಆವರಣದಲ್ಲಿ ನಿರ್ಮಿಸಿದ ಲಿಂ॥ ಬಿಸಲೇರಿ ವಿರುಪಾಕ್ಷಿ ಇವರ ವೇದಿಕೆಯಲ್ಲಿ 249ನೇ ಶಿವಾನುಭವ ಸಂಪದ ಮತ್ತು 501 ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮವೂ ಜರುಗಲಿದೆ ಎಂದು ಶ್ರೀ ಅನ್ನದಾನೇಶ್ವರ ಸಾರ್ವಜನಿಕ ಸೇವಾ ಟ್ರಸ್ಟ್‌ನ ಅಧ್ಯಕ್ಷ ಅಥಣಿ ಎಸ್.ವೀರಣ್ಣ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಸುಮಾರು 2 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಿರುವ ಶ್ರೀ ಅನ್ನದಾನೇಶ್ವರ ಸಮುದಾಯ ಭವನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಶಂಕು ಸ್ಥಾಪನೆ ನೆರವೇರಿಸುವರು.

ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠದ ಜಗದ್ಗುರು ಶ್ರೀ ಮುಪ್ಪಿನ ಬವಲಿಂಗ ಮಹಾ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಉದ್ಘಾಟಿಸುವರು.

ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್, ವಿಧಾನ ಪರಿಷತ್ ಸದಸ್ಯ ಡಾ.ಎ.ಹೆಚ್.ಶಿವಯೋಗಿಸ್ವಾಮಿ, ಪಾಲಿಕೆಯ ಆಯುಕ್ತ ವಿಶ್ವನಾಥ್ ಮುದಜ್ಜಿ, ನರೇಗಲ್‌ನ ಉಪನ್ಯಾಸಕ ಶ್ರೀ ಎಫ್.ಎನ್. ಹುಡೇದ್ ಭಾಗವಹಿಸುವರು.

**ಗೌರವ ಶ್ರೀರಕ್ಷೆ :** ಮುದ್ರಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಬಸವೇಶ್ವರ ಮುದ್ರಣಾಲಯದ ಎ.ಎಂ.ಪ್ರಕಾಶ್ ಅವರಿಗೆ 'ಕಾಯಕ ಜೀವಿ', ಉದರ ರೋಗ ಶಸ್ತ್ರ ಚಿಕಿತ್ಸಾ ತಜ್ಞ ಡಾ॥ ಮತ್ತಿಹಳ್ಳಿ ಜಿ.ಪ್ರಕಾಶ್ ಅವರಿಗೆ 'ವೈದ್ಯ ಪ್ರವೀಣ', ನಿವೃತ್ತ ಇಂಜಿನೀಯರ್ ಎಸ್.ಎಸ್. ಬಿರಾದಾರ್ ಅವರಿಗೆ 'ಕಾಯಕ ರತ್ನ', ಕೈಗಾರಿಕಾ ಕ್ಷೇತ್ರದಿಂದ ವೈ.ಬಿ.ಸತೀಶ್ ಅವರಿಗೆ 'ಸಮಾಜ ಸೇವಾ ಚಿಂತಾಮಣಿ', ವರ್ತಕ ಕೆ.ಟಿ.ಮಹಲಿಂಗೇಶ್ ಅವರಿಗೆ 'ಕಾಯಕ ಸೌರಭ' ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದರು ಪ್ರಧಾನ ಕಾರ್ಯದರ್ಶಿ ಎನ್.ಅಡಿವೆಪ್ಪ, ಪತ್ರಕರ್ತ ವೀರಪ್ಪ ಎಂ. ಭಾವಿ ತಿಳಿಸಿದ್ದಾರೆ.

## ಕೊಟ್ಟೂರು ಪಾದಯಾತ್ರೆ ಸಮಿತಿಯ ವಸತಿ ಗೃಹ ಕಟ್ಟಡಕ್ಕೆ ನಾಳೆ ಭೂಮಿ ಪೂಜೆ



ದಾವಣಗೆರೆ, ಆ. 20- ನಗರದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಕೊಟ್ಟೂರೇಶ್ವರ ಸ್ವಾಮಿ ನಿವೇಶನದಲ್ಲಿ ನಾಡಿದ್ದು ದಿನಾಂಕ 22 ರ ಸೋಮವಾರ ಬೆಳಿಗ್ಗೆ 7.30 ರಿಂದ 8.30 ರವರೆಗೆ ಪಾದಯಾತ್ರೆ ಟ್ರಸ್ಟ್ ಆಫೀಸ್ ಮತ್ತು ಅರ್ಚಕರ ಪೂಜಾ ವಸತಿ ಗೃಹ ಕಟ್ಟಡದ ಭೂಮಿ ಪೂಜೆ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ಕಣಕುಪ್ಪಿ ಮುರುಗೇಶಪ್ಪ (96118 89151), ಕಾರ್ಯದರ್ಶಿ ಟಿ.ಜೆ. ಬಕ್ಕೇಶಪ್ಪ (94483 56968) ತಿಳಿಸಿದ್ದಾರೆ.

## ಕಕ್ಕರಗೊಳ್ಳದಲ್ಲಿಂದು

ಕೆರೆ ಏರಿ ಶ್ರೀ ಭರಮದೇವರ ದೇವ ಸ್ಥಾನ ಸಮಿತಿ ವತಿಯಿಂದ ಶ್ರಾವಣ ಮಾಸದ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಇಂದು ಬೆಳಿಗ್ಗೆ 6 ಗಂಟೆಗೆ ಅಭಿಷೇಕ ನಡೆಯುವುದು. ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಪ್ರಸಾದ ಏರ್ಪಡಿಸಲಾಗಿದೆ.

ಕಾಲ್ ಸೆಂಟರ್‌ಗೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ
ಔಷಧಿ ಅಂಗಡಿಯಲ್ಲಿ 1ರಿಂದ 2 ವರ್ಷ ಕೆಲಸ ಮಾಡಿ, ಅನುಭವ ಇರುವ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸ್ಟೋರ್ ಹಾಗೂ ಗೋಡೌನ್‌ನಲ್ಲಿ ಸ್ಟಾಕ್ ತೆಗೆಯಲು
PUC / ITI / DIPLOMA
ಆದ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ESI/PF, ಗ್ರಾಚ್ಯುಟಿ, ಬೋನಸ್ ಸೌಲಭ್ಯದೊಂದಿಗೆ ಮಧ್ಯಾಹ್ನ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಇರುತ್ತದೆ.
ಎ.ಕೆ. ಫಾರ್ಮಾ ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ. M : 96117 26499, 88678 57260



ಬಾಡಿಗೆಗೆ
1. PB Roadನಲ್ಲಿ 3400x4 = 13600 Sqft B+G+2 floors
2. ಪಿಜೆ ಎಕ್ಸ್‌ಟೆನ್ಷನ್ ನಲ್ಲಿ 6000 Sqft ಬಿಲ್ಡಿಂಗ್‌ಗಳು ಬಾಡಿಗೆಗಿವೆ.
94480 28103
Suitable for Hospitals, showrooms,banks,malls, offices.

ಚಿನ್ನದ ಮೇಲೆ ಸಾಲ
10% ಬಡ್ಡಿ ಪ್ರತಿ ವರ್ಷ
* ವೇಗವಾದ ಪ್ರಕ್ರಿಯೆ
* ಗೌಪ್ಯ ಶುಲ್ಕ ಇರುವುದಿಲ್ಲ
* ಕಡಿಮೆ ಡಾಕ್ಯುಮೆಂಟೇಷನ್
ಆಸ್ತಿ ಮೇಲೆ ಸಾಲ
ಕಡಿಮೆ ಬಡ್ಡಿದರದಲ್ಲಿ
ನಿಮ್ಮ ಕನಸು ನನಸಾಗಿಸಿಕೊಳ್ಳಿ
ನಮ್ಮ ಸೇವೆಗಳು
• RTGS, NEFT • ATM ಡೆಬಿಟ್ ಕಾರ್ಡ್ • ಈ-ಸ್ಟಾಂಪಿಂಗ್
• ಇಂಟರ್‌ನೆಟ್ ಬ್ಯಾಂಕಿಂಗ್ • ಮೊಬೈಲ್ ಬ್ಯಾಂಕಿಂಗ್ • ಸ್ಥಳೀಯ ಸೌಲಭ್ಯಗಳು
ಇ-ಸ್ಟಾಂಪ್ ದೊರೆಯುತ್ತದೆ
ನಮ್ಮ ಉತ್ಪನ್ನಗಳು
ಉಳಿತಾಯ ಖಾತೆ •ಚಾಲ್ತಿ ಖಾತೆ •ಖಾಯಂ ಠೇವಣಿಗಳು •ಕ್ಯಾಷ್ ಸರ್ಟಿಫಿಕೇಟ್ •ರಿಕ್ಯುರಿಂಗ್ ಠೇವಣಿ •ಪಿಗ್ಮಿ ಠೇವಣಿ
• ಗೃಹ ಸಾಲ •ಆಸ್ತಿ ಆಧಾರಿತ ಸಾಲ • ವ್ಯವಹಾರ ಸಾಲ • ಆಭರಣ ಸಾಲ •ವ್ಯವಹಾರ ಓಡಿ ಮಿತಿ •ವಾಹನ ಸಾಲ •ಇನ್ಸುರೇನ್ಸ್, NSC ಸಾಲ
ಶ್ರೀ ಮುರುಘರಾಜೇಂದ್ರ ಕೋ-ಆಪ್, ಬ್ಯಾಂಕ್ ಲಿ.,
1058/3-4, ಲಾಯರ್ ರಸ್ತೆ, ಶ್ರೀ ಜಯದೇವ ಸರ್ಕಲ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ.
ಮೊ: 08192-257901, 255875, 230304, ಮೊ: 9449942386, 9900528672

## ವೋಟರ್ ಐಡಿ, ಆಧಾರ್ ಜೋಡಣೆ ಶಿಬಿರ

ದಾವಣಗೆರೆ, ಆ.20 - ಎಂಸಿಸಿ ಬಿ ಬ್ಲಾಕ್‌ನ ನಾಗರಿಕರ ಅನುಕೂಲಕ್ಕಾಗಿ ನಾಡಿದ್ದು ದಿನಾಂಕ 22ರ ಸೋಮವಾರ ವೋಟರ್ ಐಡಿ ಹಾಗೂ ಆಧಾರ್ ಕಾರ್ಡ್ ಸಂಖ್ಯೆಗಳ ಜೋಡಣಾ ಶಿಬಿರ ನಡೆಯಲಿದೆ. ಬೆಳಿಗ್ಗೆ 10 ರಿಂದ ಐಎಂಎ ಹಾಲ್ ನಲ್ಲಿ ಶಿಬಿರ ನಡೆಯಲಿದೆ. ಸಾರ್ವಜನಿಕರು ತಮ್ಮ ಚುನಾವಣಾ ಗುರುತಿನ ಚೀಟಿಗೆ (ವೋಟರ್ ಐಡಿ) ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡುವುದು ಅತ್ಯಗತ್ಯ. ಆದ ಕಾರಣ ಶಿಬಿರ ಆಯೋಜಿಸಲಾಗಿದೆ ಎಂದು ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ತಿಳಿಸಿದ್ದಾರೆ.

## ಮಕ್ಕಳ ಕಲ್ಯಾಣ ಸಮಿತಿಗೆ ಆಯ್ಕೆ ಅವಧಿ ವಿಸ್ತರಣೆ

ದಾವಣಗೆರೆ ಆ.20- ರಾಜ್ಯದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಬಾಲ ನ್ಯಾಯ ಮಂಡಳಿಗಳಿಗೆ ಸಾಮಾಜಿಕ ಕಾರ್ಯಕರ್ತರನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಸಲ್ಲಿಸಲು ನಿಗದಿ ಪಡಿಸಲಾಗಿದ್ದ ದಿನಾಂಕವನ್ನು 1.09.2022ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

## ಮಲೇಬೆನ್ನೂರು : ಇಂದು ಹಂದರಗಂಬ ಪೂಜೆ

ನೀರಾವರಿ ಇಲಾಖೆ ಆವರಣದಲ್ಲಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗಾಗಿ ಇಂದು ಬೆಳಿಗ್ಗೆ 10.30ಕ್ಕೆ ಹಂದರಗಂಬ ಪೂಜೆ ನಡೆಯಲಿದೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.


ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

96861 95327

ಚಾಮರಾಜಪೇಟೆ, ದಾವಣಗೆರೆ - 577 001.


## ಪ್ರಥಮ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ನಗರದ ವರ್ತಕರು ಹಾಗೂ ಶಿವ ಸಹಕಾರಿ ಬ್ಯಾಂಕ್ ಮಾಜಿ ನಿರ್ದೇಶಕರಾದ

**ಎಂ.ಜಿ.ಮಲ್ಲಪ್ಪನವರ**

**ಪ್ರಥಮ ವರ್ಷದ ಪುಣ್ಯಸ್ಮರಣೆ**

ಕಾರ್ಯಕ್ರಮವನ್ನು ದಿನಾಂಕ 21.8.2022ನೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ಮೆದಿಕೆರೆ ಗ್ರಾಮದ ಮೃತರ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ.

ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

**ಧರ್ಮಪತ್ನಿ ಶ್ರೀಮತಿ ರತ್ನಮ್ಮ, ಎಂ.ಜಿ ಮಲ್ಲಪ್ಪ, ಸಹೋದರರು, ಸಹೋದರಿಯರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಗೌಡ್ರ ವಂಶಸ್ಥರು, ಮೆದಿಕೆರೆ ಹಾಗೂ ಬಂಧು-ಮಿತ್ರರು.**


BSC

B.S. CHANNABASAPPA & SONS

ಸ್ಥಾಪನೆ - 1938

ಶ್ರಾವಣ ಸಂಭ್ರಮ 2022

ಅತ್ಯಂತ ಜನಪ್ರಿಯ

ಡಬಲ್ ಡಿಸ್ಕೌಂಟ್

24-08-2022 ರಂದು ಕೊನೆಗೊಳ್ಳುವುದು

ಈ ಕೂಡಲೇ ಖರೀದಿಸಿ

ದಾವಣಗೆರೆಯ ಶಾಖೆಗಳಲ್ಲಿ ಮಾತ್ರ

ಬಿ.ಎಸ್.ಚನ್ನಬಸಪ್ಪ & ಸನ್ಸ್



## ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ

## ಗೃಹಶೋಭೆ




ಆಗಸ್ಟ್ 19 ರಿಂದ 28 ರವರೆಗೆ

ಸರ್ಕಾರಿ ಹೈ ಸ್ಕೂಲ್ ಮೈದಾನ

ಮಹಾನಗರ ಪಾಲಿಕೆ ಹತ್ತಿರ, ದಾವಣಗೆರೆ

ENTRY Rs. 10/- Children Below 10 Years Free Entry PARKING FREE



## ನ್ಯೂ ಇಂಡಿಯನ್ ಕ್ರಾಫ್ಟ್ ಎಕ್ಸ್‌ಪೋ-2022

Regd. by : O/o D.C.H. Ministry of India Real Indian Crafyt.....

Exhibition cum Sale

17-8-2022 to 19-9-2022

Daily 10.30 am to 9.30 pm




ಸಮಸ್ತ ಭಾರತದ ಕರಕುಶಲ ಹಾಗೂ ಕೈಮಗ್ಗದ ಅಪೂರ್ವ ಸಂಗಮ

| | | | |
|---|---|---|---|
| ಉತ್ತರ ಪ್ರದೇಶ | ಜಮ್ಮು-ಕಾಶ್ಮೀರ | ತಮಿಳುನಾಡು | ಒರಿಸ್ಸಾ |
| ರಾಜಸ್ಥಾನ | ಹರಿಯಾಣ | ನಾಗಾಲ್ಯಾಂಡ್ | ಮಹಾರಾಷ್ಟ್ರ |
| ಮಧ್ಯಪ್ರದೇಶ | ಪಶ್ಚಿಮ ಬಂಗಾಳ | ಕೇರಳ | ದೆಹಲಿ |
| ಗುಜರಾತ್ | ಆಂಧ್ರ ಪ್ರದೇಶ | ಅಸ್ಸಾಂ | ಛತ್ತೀಸ್‌ಗಡ |

ಓಪನ್ ಗ್ರೌಂಡ್, ನರಹರಿಶೇಟ್ ಕಲ್ಯಾಣ ಮಂಟಪದ ಎದುರು, ಪಿ.ಬಿ. ರಸ್ತೆ, ದಾವಣಗೆರೆ.


## ಕೈಲಾಸ ಶಿವಗಣಾರಾಧನೆ



ದಾವಣಗೆರೆ ತಾ. ಜಿಲ್ಲೆ ಆನಗೋಡು ಹೋಬಳಿ ಹುಣಸಕಟ್ಟೆ ವಾಸಿ

**ದಿ.ಹುಣಸೇಕಟ್ಟೆ ಶಿವಪ್ಪನವರ ಮಗ ಶ್ರೀ ಎಂ.ಎಸ್. ರಾಜು ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 8.8.2022ನೇ ಸೋಮವಾರ ರಾತ್ರಿ 11.35ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಜಯ್ಯಮ್ಮ**

(P.L.D. Bank ಮಾಜಿ ನಿರ್ದೇಶಕರು, ದಾವಣಗೆರೆ )

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆ**ಯನ್ನು ದಿನಾಂಕ 21.8.2022ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಹುಣಸೇಕಟ್ಟೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಶ್ರೀ ಎಂ.ಎಸ್.ರಾಜು ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಗುರುಬಸಪ್ಪರ ವಂಶಸ್ಥರು ಹಾಗೂ ಬಂಧು-ಮಿತ್ರರು.**

# ಸನ್ಮತಿ ಸೌಹಾರ್ದ ಸಹಕಾರಿ ನಿಯಮಿತ

ನಂ. 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ-577 001.

## ಐದನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನೆಗಳು

ಸನ್ಮತಿ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಇದರ 2021-2022ನೇ ಸಾಲಿನ ಐದನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 21.08.2022ನೇ ಭಾನುವಾರ ಬೆಳಗ್ಗೆ 11.30 ಗಂಟೆಗೆ ಸಂಘದ ಸಂಸ್ಥಾಪಕಾಧ್ಯಕ್ಷರಾದ ಟಿ.ಎಂ. ಪಾಲಾಕ್ಷ ಅವರ ಅಧ್ಯಕ್ಷತೆಯಲ್ಲಿ ದಾವಣಗೆರೆ ನಗರದ ರೋಟರಿ ಬಾಲ ಭವನದಲ್ಲಿ ಏರ್ಪಡಿಸಲಾಗಿದೆ. ಆದ ಪ್ರಯುಕ್ತ ಮಾನ್ಯ ಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.



ಶ್ರೀ ಟಿ.ಎಂ. ಪಾಲಾಕ್ಷ
ಅಧ್ಯಕ್ಷರು

ನಿರ್ದೇಶಕ ಮಂಡಳಿ



ಶ್ರೀ ವಿ.ಹೆಚ್. ಕುಮಾರ್
ಉಪಾಧ್ಯಕ್ಷರು



ಶ್ರೀ ವೀರೇಶ್ ಸಿ.ಜಿ.
ನಿರ್ದೇಶಕರು



ಶ್ರೀ ಎನ್.ಹೆಚ್. ಪ್ರಕಾಶಚಾರಿ
ನಿರ್ದೇಶಕರು



ಶ್ರೀ ನ್ಯಾಮತಿ ವಾಮದೇವ್
ನಿರ್ದೇಶಕರು



ಶ್ರೀ ಇಮ್ರಾನ್ ಖಾನ್ ಆರ್.
ನಿರ್ದೇಶಕರು



ಶ್ರೀ ರುದ್ರೇಶ್ ಡಿ.
ನಿರ್ದೇಶಕರು



ಶ್ರೀ ಪ್ರಸಾದ್ ವಿ. ರಾಯ್ಕರ್
ನಿರ್ದೇಶಕರು



ಶ್ರೀ ನರಸಿಂಹಮೂರ್ತಿ ಸಿ.
ನಿರ್ದೇಶಕರು



ಶ್ರೀಮತಿ ಸ್ಮಿತ ಡಿ.ಆರ್.
ನಿರ್ದೇಶಕರು



ಶ್ರೀಮತಿ ಲತಾ ಕೆ.
ನಿರ್ದೇಶಕರು



ಶ್ರೀಮತಿ ರಾಜೇಶ್ವರಿ ಮುರುಗೇಶ್
ನಿರ್ದೇಶಕರು



ಶ್ರೀ ಮಹಮ್ಮದ್ ಉಬೇದುಲ್ಲಾ
ಮುಖ್ಯ ಕಾರ್ಯದರ್ಶಿ

| ಕ್ರ.ಮ. | ವಿವರ | 2019-2020 | 2020-2021 | 2021-2022 |
|---|---|---|---|---|
| 01) | ಸದಸ್ಯರ ಸಂಖ್ಯೆ | 821 | 861 | 926 |
| 02) | ಸದಸ್ಯರ ಷೇರು | 20,83,800-00 | 21,94,300-00 | 23,33,800-00 |
| 03) | ಠೇವಣಿಗಳು | 2,18,39,977-00 | 2,46,47,843-00 | 3,00,62,179-00 |
| 04) | ನಿಧಿಗಳು | 5,98,615-00 | 11,04,195-00 | 17,58,811-00 |
| 05) | ಸಾಲಗಳು | 1,93,44,351-00 | 2,14,30,790-00 | 2,56,21,214-00 |
| 06) | ಲಾಭಾಂಶ | 6,16,637-00 | 7,72,251-00 | 8,73,875-00 |
| 07) | ದುಡಿಯುವ ಬಂಡವಾಳ | 2,51,39,029-00 | 2,87,18,588-00 | 3,50,28,665-00 |

**ವಿಶೇಷ ಸೂಚನೆ :** ಈಗಿನ ಹೊಸ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳಂತೆ ಈ 2021-22ನೇ ಸಾಲಿನಿಂದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಎರಡು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ, ದಯಮಾಡಿ ಮಾನ್ಯ ಸದಸ್ಯರು ಪ್ರತಿ ವಾರ್ಷಿಕ ಮಹಾಸಭೆಗೆ ತಪ್ಪದೇ ಹಾಜರಾಗಬೇಕೆಂದು ಕೋರಲಾಗಿದೆ. *ಈಗಾಗಲೇ ಮಹಾಸಭೆ ನೋಟಿಸನ್ನು ಸರ್ವ ಸದಸ್ಯರಿಗೂ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟಿಸ್ ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸತಕ್ಕದ್ದು ಹಾಗೂ ಸಭೆಗೆ ಬರುವಾಗ ಮಹಾ ಸಭೆ ಆಹ್ವಾನ ಪತ್ರಿಕೆ ತರತಕ್ಕದ್ದು, * ಕೋವಿಡ್ 19 ಪ್ರಯುಕ್ತ ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ವಿನಂತಿಸಿಕೊಳ್ಳುತ್ತೇವೆ.

ದಿನಾಂಕ : 30.07.2022
ದಾವಣಗೆರೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- (ಮಹಮ್ಮದ್ ಉಬೇದುಲ್ಲಾ) ಮುಖ್ಯ ಕಾರ್ಯದರ್ಶಿ


॥ ಶ್ರೀ ಹುಲಿಕುಂಟೇಶ್ವರ ಪ್ರಸನ್ನ ॥

# ಶ್ರೀ ರಾಮಧೂತ ಎಂಟರ್‌ಪ್ರೈಸಸ್

SRE

ನಮ್ಮ ನಾಲ್ಕನೇಯ ಶಾಖೆಯ

ಅದ್ದೂರಿ ಪ್ರಾರಂಭೋತ್ಸವ...






ಸ್ಥಳ : # 3609/10, ಕುಂದವಾಡ ರೋಡ್, ಬಾಲಾಜಿ ನಗರ, ದಾವಣಗೆರೆ-04.

ದಿನಾಂಕ : 21.8.22ನೇ ಭಾನುವಾರ ಬೆಳಿಗ್ಗೆ 10.30ಕ್ಕೆ

ನಮ್ಮಲ್ಲಿ ಎಲ್ಲಾ ರೀತಿಯ ಪ್ಲಂಬಿಂಗ್ ಮತ್ತು ಸ್ಯಾನಿಟರಿ ವಸ್ತುಗಳು ಹೋಲ್‌ಸೇಲ್ ದರದಲ್ಲಿ ದೊರೆಯುತ್ತವೆ.

ನಮ್ಮ ಶಾಖೆಗಳು :

**ಶ್ರೀ ರಾಮಧೂತ ಹಾರ್ಡ್‌ವೇರ್ಸ್ & ಪೈಪ್ಸ್**
ಎಂ.ಸಿ.ಸಿ. ಬಿ ಬ್ಲಾಕ್, ಹಳೆ ಆರ್‌ಟಿಓ ಆಫೀಸ್ ಹತ್ತಿರ, ಬಿಐಇಟಿ ರೋಡ್, ದಾವಣಗೆರೆ.

**ಶ್ರೀ ರಾಮಧೂತ ಎಂಟರ್‌ಪ್ರೈಸಸ್**
ಅನನ್ಯ ಕಾಂಪ್ಲೆಕ್ಸ್, ಭಗೀರಥ ಸರ್ಕಲ್, ಎಸ್.ಎಸ್. ಹಾಸ್ಪಿಟಲ್ ಮೇನ್ ರೋಡ್, ದಾವಣಗೆರೆ.

**ಶ್ರೀ ರಾಮಧೂತ ಎಂಟರ್‌ಪ್ರೈಸಸ್**
ಆರೈಕೆ ಹಾಸ್ಪಿಟಲ್ ಎದುರು, ಹದಡಿ ರೋಡ್, ದಾವಣಗೆರೆ.

ಇಲ್ಲಿಯವರೆಗೂ ನಮಗೆ ಸಹಕರಿಸಿದ ಗ್ರಾಹಕರಿಗೂ, ಪ್ಲಂಬರ್‌ಗಳಿಗೂ, ಸಿಬ್ಬಂದಿ ವರ್ಗ ಮತ್ತು ಕುಟುಂಬದವರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು... ಹಾಗೂ ಹೀಗೆ ನಿಮ್ಮೆಲ್ಲರ ಸಹಕಾರ ನಮ್ಮೊಂದಿಗೆ ಸದಾ ಇರಲಿ...


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte